ಶ್ರೀ ಹೆಚ್. ಗಂಗಾಧರಸ್ (ಚಾಮರಾಜ್) .—ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ಸರ್ಕಾರದ ದವರು ಇಂಥ ಒಂದು ದಿಟ್ಟ ನಿಲುವನ್ನು ತಳೆದು ಮಾನ್ಯ ಮುಖ್ಯ ಮಂತ್ರಿಗಳವರು ಏನೊಂದು ಯೋಜನೆಯನ್ನು ಕೈಗೊಂಡಿದ್ದಾರೆ ಅವಕ್ಕಾಗಿ ಮಂಡ್ಯ ಜನತೆಯ ಪರವಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮತ್ತು ಈ ಕಾರ್ಯವನ್ನು ಆದಷ್ಟು ಜಾಗ್ರತೆ ಎಷ್ಟೇ ಹಣ ಖರ್ಚಾದರೂ ಹಿಂದೆಮುಂದೆ ನೋಡದೆ ಕಾರ್ಯಗತವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಂಜೇಗೌಡ (ಮದ್ದೂರು) .—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಈ ಸಮಸ್ಯೆಯನ್ನು ಸದನದ ಮುಂದೆ ನಿಂಡಿಪಬೇಲೆ ಅದರ ಬಗ್ಗೆ ಮತ್ತೆ ಚರ್ಚೆಮಾಡತಕ್ಕ ಇಚ್ಛೆ ನನಗಿಲ್ಲ ಆದರೆ, ಮಂಡ್ಯ ಜಿಲ್ಲೆಯ ಜನತೆಯ ಸೌಜನ್ಯದ ಬಗ್ಗೆ ಆನುಮಾನ ಬಂದಿತು ಎಂಬ ದೃಷ್ಟಿಯಿಂದ ಹಾಗೂ ಕರ್ತವ್ಯದ ದೃಷ್ಟಿಯಿಂದ ಕಳೆದ ೨೦ ವರ್ಷಗಳಿಂದಲೂ ಬಿಗಡಾಯಿಸಿಕೊಂಡಿದ್ದಂಥ ಈ ಸಮಸ್ಯೆಯನ್ನು ಇವತ್ತು ದೂರ ಮಾಡಿದಂತಾಗಿದೆ. ಮಂಡ್ಯ ಜನತೆಯನ್ನು ಕಡಿದು ಸರ್ಕಾರಕ್ಕೆ ಒಂದು ವಿಧವಾದ ಕೆಟ್ಟಭಾವನೆ ಇದೆ. ಅದಕ್ಕೋಸ್ಕರವಾಗಿಯೇ ವರದಾನಾಲೆಯ ಪ್ರಸ್ತಾಪ ಮಾಡುತ್ತಿದ್ದಾರೆಯು ಎಲ್ಲರ ಮನಸ್ಸಿನಲ್ಲೂ ಇತ್ತು. ಅದೇ ರೀತಿ ಮೈಸೂರು ಜಿಲ್ಲೆಗೆ ಕನ್ನಂಬಾಡಿ ಕಟ್ಟೆಯಿಂದ ನೀರನ್ನು ಕೊಡಬೇಕಾದರೆ ಮಂಡ್ಯ ಜನತೆ ಸ್ವಾರ್ಥದೃಷ್ಟಿಯಿಂದ ಇದನ್ನು ವಿರೋಧ ಮಾಡುತ್ತಿದ್ದಾರೆಂಬ ಅಭಿಪ್ರಾಯವಿತ್ತು. ಆದರೆ ಈಗ ಇವರು ಒಂದು ಒಮ್ಮತದ ತೀರ್ಮಾನಕ್ಕೆ ಬಂದಿದ್ದಾರೆ ಈ ಯೋಜನೆಗೆ ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲ ಈ ಯೋಜನೆಯನ್ನು ಮುಗಿಸಿಯೇ ತೀರಬೇಕೆಂದು ಈ ಸಭೆ ಹಾಗೂ ಮಾನ್ಯ ಮುಖ್ಯ ಮಂತ್ರಿಯವರು ಇವಕ್ಕೆ ಒಪ್ಪಿಗೆಯನ್ನು ನೀಡಿದ್ದಾರೆ. ಈ ವಿಚಾರದಲ್ಲಿ ಮಂಡ್ಯ ಜಿಲ್ಲೆಯ ಜನತೆ ತಮ್ಮ ಜೀವನಪರ್ಯಂತ ಈ ಸರ್ಕಾರದವರನ್ನು ನೆನಸಿಕೊಳ್ಳಬೇಕಾಗಿದೆ. ಅದಕ್ಕಾಗಿ ನಾನು ಸರ್ಕಾರದವರನ್ನು ಮಂಡ್ಯ ಜನತೆಯ ಪರವಾಗಿ ವಂದಿಸುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇನ್ನೊಂದು ಹೆಚ್ಚಿನ ವಿಷಯವೆಂದರೆ. ಈ ವರದಾನಾಲೆ ವಿಚಾರದಲ್ಲಿ ಅತ್ಮಿನವಿಪಸ ಉದ್ದೇಶ ಪೂರ್ವಕವಾಗಿಯೋ ಅಥವಾ ಇನ್ನಾವುದೋ ಅಭಿಪ್ರಾಯದಿಂದಲೋ ಏನೋದು ಅಮಾನುಷ ಘಟನೆಗಳು ಆದು ನಡೆದುವು ಅವು ಮಾನ್ಯ ಮುಖ್ಯ ಮಂತ್ರಿಯವರ ಹಾಗೂ ಹಲವಾರು ರಾಜಕೀಯ ಪಕ್ಷಗಳ ಮನಸ್ಸುಗಳಿಗೆ ಬಹಳ ನೋವನ್ನುಂಟುಮಾಡಿವೆ. ಆ ಸಂದರ್ಭದಲ್ಲಿ ಕಾನೂನು ರೀತಿಯಲ್ಲಿ ಅನೇಕರ ಮೇಲೆ ಕೇಸುಗಳನ್ನು ಹಾಕಿದ್ದರೂ ಕೂಡ ಅವರ ಮೇಲೆ ಅಂತಃಕರಣಾಟ್ಟು ಆರ ಮೇಲಿನ್ದ ಕೇಸುಗಳನ್ನೆಲ್ಲಾ ವಾಪಸು ತೆಗೆದುಕೊಂಡರು. ಕಳೆದ ೩೦-೪೦ ವರ್ಷಗಳಿಂದ ಇದ್ದಂಥ ಸಮಸ್ಯೆಯನ್ನು ಇವತ್ತು ನಿವಾರಿಸಿದಂತಾಗಿದೆ. ಈ ಸಮಸ್ಯೆ ೨ ಜಿಲ್ಲೆಗಳ ಜನರ ಆಸೆಗಳನ್ನು ಈಡೇರಿಸುವಂಥಾದ್ದಾಗಿದೆ. ಅದಕ್ಕಾಗಿ ನಾನು ಮಂಡ್ಯ ಜಿಲ್ಲೆಯ ಜನರ ಪರವಾಗಿ ಮಾನ್ಯ ಮುಖ್ಯ ಮಂತ್ರಿಯವರನ್ನು ಅಭಿನಂದಿಸುತ್ತೇನೆ.

ಶ್ರೀ ಕೆ. ಆರ್. ರಾಜಗೋಪಾಲ್ (ಪಾಂಡವಪುರ) .—ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ೫೦ ವರ್ಷಗಳ ಹಿಂದೆಯೇ ಮಾಡಬೇಕಾಗಿದ್ದ ಕೆಲಸವನ್ನು ನಮ್ಮ ಸರ್ಕಾರ ಇವತ್ತು ಮಾಡಿ ತೋರಿಸುತ್ತಿದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರನ್ನು ಮಂಡ್ಯ ಜನತೆಯ ಪರವಾಗಿ ಅಭಿನಂದಿಸುತ್ತೇನೆ.

Non Official Resolutions :

re : providing civic amenities to people residing in slum area of Bangalore city (debate continued from 8-8-78)

† ಶ್ರೀ ಜಿ. ರಾಂದೇವ್ (ಮಲ್ಲೇಶ್ವರಂ) .—ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ನಗರದ ವಿಚಾರದಲ್ಲಿ ಮಾತನಾಡುವುದಾದರೆ, ಕೊಳಚೆ ಪ್ರದೇಶದಲ್ಲಿರತಕ್ಕ ನಿವಾಸಿಗಳು ಬಹಳ ತೊಂದರೆಯಲ್ಲಿದ್ದಾರೆ. ಅವರಿಗೆ ಅಗತ್ಯವಾಗಿ ಬೇಕಾಗಿರತಕ್ಕ ಪೌರಸೌಲಭ್ಯಗಳನ್ನು ಒದಗಿಸುವ ಬಗ್ಗೆ ನಾನು ಒಂದು ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದೇನೆ ಮಾನ್ಯ ಮುಖ್ಯ ಮಂತ್ರಿಯವರ ಔದಾರ್ಯವನ್ನು ಅನೇಕ ಸದಸ್ಯರು ಕೊಂಡಾಡಿದರು. ಅವರು ಕೊಂಡಾಡಬೇಕಾದುದು ಸಹಜವಾದುದೇ ಸರಿ. ಆದರೆ ಇಡೀ ರಾಜ್ಯದಲ್ಲೇ ಉತ್ತಮ ಕೆಲಸಕಾರ್ಯಗಳನ್ನು ಮಾಡುತ್ತಿರುವ ಮಾನ್ಯ ಮುಖ್ಯ ಮಂತ್ರಿಯವರು ನಮ್ಮ ಈ ಬೆಂಗಳೂರು ನಗರದ ಜನತೆಯ ಬಗ್ಗೆ ಏತಕ್ಕೆ ಸಾಕಷ್ಟು ತಮ್ಮ ಗಮನವನ್ನು

ಕೊಡುತ್ತಿಲ್ಲವೆಂದು ನಾವು ಯೋಚಿಸಬೇಕಾಗಿದೆ. ಬೆಂಗಳೂರು ಜನತೆಯ ಬೃಹತ್ ಸಮಸ್ಯೆಗಳಾವುವೂ ಇವತ್ತು ಪರಿಹಾರವಾಗಿಲ್ಲ. ಇವತ್ತು ನಮ್ಮ ಮುಂದಿರತಕ್ಕದ್ದು ಕೊಳಚೆ ಪ್ರದೇಶಗಳ ಜನರ ಸಮಸ್ಯೆಗಳು. ಸುಮಾರು ೭೦–೮೦ ವರ್ಷಗಳಿಂದಲೂ ಕೂಡ ನಮ್ಮ ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶಗಳು ಬೆಳೆದುಕೊಂಡೇ ಬರುತ್ತಿವೆ. ಇತ್ತೀಚೆಗಂತೂ ಇವು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿವೆ. ಇವತ್ತು ಸುಮಾರು ೪೦೦ ಕೊಳಚೆಪ್ರದೇಶಗಳು ನಮ್ಮ ಬೆಂಗಳೂರು ಒಂದರಲ್ಲೇ ಇವೆ. ಬೆಂಗಳೂರು ನಗರ ಸಭಯವರು ೧೯೬೮ರ ಆಕ್ಟೋಬರ್ ತಿಂಗಳಲ್ಲಿ ಒಂದು ಸಮೀಕ್ಷೆ ನಡೆಸಿ ಬೆಂಗಳೂರಿನಲ್ಲಿ ೧೯೯ ಕೊಳಚೆ ಪ್ರದೇಶಗಳಿವೆ, ಸುಮಾರು ೩೨,೫೬೬ ಗುಡಿಸಲುಗಳಿವೆ, ಆದರಲ್ಲಿ ಸುಮಾರು ೧ ಲಕ್ಷ ೬೨ಸಾವಿರ ಜನರು ವಾಸಮಾಡುತ್ತಿದ್ದಾರೆಂದು ವರದಿಯನ್ನು ಸ್ಪಷ್ಟಿಸಿದ್ದಾರೆ. ಈ ೧೯೯ ಕೊಳಚೆ ಪ್ರದೇಶಗಳ ಪೈಕಿ ಸುಮಾರು ೬೨ ಕೊಳಚೆ ಪ್ರದೇಶಗಳು ಬೆಂಗಳೂರು ನಗರಸಭೆಯ ಜಮೀನಿನ ಮೇಲೂ, ೨೭ ಸರ್ಕಾರದ ಜಮೀನಿನ ಮೇಲೂ, ಮತ್ತು ೧೧೦ ಖಾಸಗಿ ಜಮೀನಿನ ಮೇಲೂ ಇವೆಯೆಂದು ಹೇಳಿದ್ದಾರೆ.

೧೨–೦೦ ಮಧ್ಯಾಹ್ನ

(ಚೇರ್ಮನ್ ಶ್ರೀ ವೀರಪ್ಪ ಮೊಯಿಲಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಪ್ರದೇಶಗಳನ್ನು ಉತ್ತಮ ಪಡಿಸಬೇಕು. ಮತ್ತು ಕೊಳಚೆ ಪ್ರದೇಶಗಳನ್ನು ಉತ್ತಮಪಡಿಸಲು ಆವರಣ ನೈರ್ಮಲ್ಯ ಜಾರಿಗೆ ತರಬೇಕು. ಉತ್ತಮವಾದ ಸೌಲಭ್ಯಗಳನ್ನು ಕೊಡಬೇಕು ಎನ್ನತಕ್ಕಂಥ ಮಾತನ್ನು ಹಲವಾರು ವರ್ಷಗಳಿಂದ ಮಾನ್ಯ ಮುಖ್ಯ ಮಂತ್ರಿಯವರು, ರಾಜಕಾರಣಿಗಳು ಪ್ರತಿಯೊಬ್ಬರೂ ಹೇಳಿಕೊಂಡೇ ಬಂದಿರುತ್ತಾರೆ. ಆದರೆ ಈ ಪತ್ತಿನದಿವಸ ಏನಾಗಿದೆ ಎಂದರೆ ಸುಮಾರು ೧೯೬೮ನೇ ಇಸವಿಯಿಂದ ೧೯೭೯ನೇ ಇಸವಿಯವರೆಗೆ ಅಂದರೆ ೧೧ ವರ್ಷಗಳಿಂದಲೂ ಸುಮಾರು ಇನ್ನೂರು ಚಿಲ್ಲರೆ ಕೊಳಚೆಪ್ರದೇಶಗಳು ಬೆಂಗಳೂರು ನಗರದಲ್ಲಿ ಹುಟ್ಟಿಕೊಂಡು ಬಂದಿರುತ್ತವೆ. ಇತ್ತೀಚೆಗೆ ನಾವು ನೋಡಿದ ಹಾಗೆ ಜಯನಗರದ ಬನಶಂಕರಿ ೬ನೇ ಸ್ಟೇಜ್‌ನಲ್ಲಿ ಹೊಸದಾಗಿ ಹುಟ್ಟಿಕೊಂಡಿರುವ ಕೊಳಚೆ ಪ್ರದೇಶ ರಾಜಾಜಿನಗರದ ಸಮೂಹದಲ್ಲಿ ಹಬ್ಬಿರುವ ಕೊಳಚೆ ಪ್ರದೇಶದ ಬಗ್ಗೆ ಪತ್ರಿಕೆಯಲ್ಲಿಯೂ ಕೂಡ ಬಂದಿರುತ್ತದೆ. ಇದರ ಬಗ್ಗೆ ಮೇಲ್ಮನೆಯಲ್ಲಿಯೂ ಕೂಡ ಚರ್ಚೆಯಾಗಿರುತ್ತದೆ. ನಾಯಿ ಕೊಡೆಗಳಹಾಗೆ ಈ ರೀತಿಯಾದ ಕೊಳಚೇ ಪ್ರದೇಶಗಳು ಹುಟ್ಟಿಕೊಂಡು ಬೃಹದಾಕಾರವಾಗಿ ಬೆಳೆಯುತ್ತಿರುತ್ತವೆ. ಆದರೆ ಸೌಲಭ್ಯ, ಮಾತ್ರ ಯಾವ ಸಂಸ್ಥೆಯೇ ಆಗಲಿ, ಬೆಂಗಳೂರು ನಗರದ ಕಾರ್ಪೊರೇಷನ್ ಆಗಲಿ ಬಿ.ಡಿ.ಎ. ಆಗಲಿ ಕರ್ನಾಟಕ ಹೌಸಿಂಗ್ ಬೋರ್ಡ್ ಆಗಲಿ ಕೊಳಚೇ ನಿರ್ಮೂಲನಾ ಮಂಡಲಿಯೇ ಆಗಲಿ ಕರ್ನಾಟಕ ರಾಜ್ಯ ಸರ್ಕಾರವೇ ಆಗಲಿ ಯಾವ ವಿಧವಾದ ಗಮನವನ್ನು ಕೊಡುತ್ತಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಉದಾಹರಣೆಗೆ ಹೇಳಬೇಕಾದರೆ ಅಣ್ಣಮ್ಮ ದೇವಸ್ಥಾನದ ಹಿಂಬಾಗದಲ್ಲಿರತಕ್ಕಂಥ ಕೊಳಚೇ ಪ್ರದೇಶ ಈವತ್ತಿಗೂ ಲೈಟನ್ನು ಕಂಡಿಲ್ಲ, ಕುಡಿಯುವುದಕ್ಕೆ ನೀರಿನ ಸೌಲಭ್ಯ ಹೊಂದಿಲ್ಲ ಶೌಚಾಗೃಹವನ್ನು ಹೊಂದಿಲ್ಲ ೭೦–೮೦ ವರ್ಷಗಳಿಂದಲೂ ಹಾಗೆಯೇ ಇರುತ್ತದೆಂದರೆ ಸ್ಲಮ್ಸ್‌ನಲ್ಲಿ ವಾಸಮಾಡತಕ್ಕಂಥ ಜನರು ಯಾವರೀತಿ ಇರಬೇಕೆಂಬುದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

೭೦–೮೦ ವರ್ಷಗಳಿಂದಲೂ ಮಲ್ಲೇಶ್ವರಂ ಮತ್ತು ಶ್ರೀ ರಾಮಪುರದಲ್ಲಿ ಸ್ವತಂತ್ರ ನಗರದಲ್ಲಿ ಇರತಕ್ಕಂಥ ಹಲವಾರು ಕೊಳಚೇ ಪ್ರದೇಶಗಳಲ್ಲಿ ಯಾವುದೇ ರೀತಿಯಾದ ಪೌರಸೌಲಭ್ಯಗಳು ಇಲ್ಲದೆ ವಾಸ ಮಾಡುತ್ತಿರುತ್ತಾರೆ. ನಿವೃತ್ತ ರಾಷ್ಟ್ರಪತಿ ಶ್ರೀ ವಿ.ವಿ. ಗಿರಿಯವರು ಅಂದು ಹೇಳಿದ ಮಾತುಹೀಗಿದೆ ಈ ಕೊಳಚೇ ಪ್ರದೇಶಗಳಲ್ಲಿ ಅಲ್ಲಿ ನಾಯಿಗಳು ಕೂಡ ವಾಸಮಾಡುವುದಕ್ಕೆ ಸಾಧ್ಯವಿಲ್ಲವೆಂದು ಒಂದು ಸಂದರ್ಭದಲ್ಲಿ ಹೇಳಿರುತ್ತಾರೆ. ಪ್ರಾಣಿಗಳು ವಾಸಮಾಡಲಿಕ್ಕೆ ಸಾಧ್ಯವಾಗದೆ ಇರತಕ್ಕಂಥ ಪ್ರದೇಶಗಳಲ್ಲಿ ಸುಮಾರು ನಾಲ್ಕಾರಿಂದ ಆರು ಲಕ್ಷವರೆಗೆ ಜನರು ವಾಸ ಮಾಡುತ್ತಿರುತ್ತಾರೆ ಎಂದರೆ ಸರ್ಕಾರದವರಿಗೆ ಯಾವರೀತಿ ಕೀರ್ತಿ ಬರುತ್ತದೆಂದು ಯೋಚನೆ ಮಾಡಬೇಕಾಗಿರುತ್ತದೆ. ನಮಗೆ ತಿಳಿದಹಾಗೆ ಕೆಲವು ಸ್ಲಮ್ಸ್‌ಗಳ ಶತಮಾನೋತ್ಸವವನ್ನು ಆಚರಿಸಬಹುದು. ೧೦೦ ವರ್ಷಗಳಾದರೂ ಸ್ಲಮ್ಸ್ ಹಾಗೆಯೇ ಉಳಿದಿರುತ್ತದೆ. ಅಲ್ಲಿಯೇ ಹುಟ್ಟಿದ ಮಕ್ಕಳು ಬೆಳೆದು ದೊಡ್ಡವರಾಗಿ ಸಂಸಾರವನ್ನು ಮಾಡಿಕೊಂಡಿರುತ್ತಾರೆ. ಯಾವುದೇ ಸರ್ಕಾರ ಆಡಳಿತಕ್ಕೆ ಬಂದರೂ ಚುನಾವಣಾ ಸಂದರ್ಭದಲ್ಲಿ ಏನು ಒಂದು ಅವರಿಂದ ಓಟನ್ನು ಗಳಿಸಲು ವಿಷ್ಟು ಅನುಕೂಲಗಳನ್ನು ಮಾಡಿಕೊಡಬೇಕೋ ಅಷ್ಟು ಮಾತ್ರ ಮಾಡಿ ಉಳಿದ ಸಂದರ್ಭಗಳಲ್ಲಿ ಇವರಿಗೆ ಯಾವರೀತಿಯಾದ ಸೌಲಭ್ಯಗಳನ್ನು ಒದಗಿಸದೆ ಅವರನ್ನು ಕೇಳುವವರೇ ದಿಕ್ಕಿಲ್ಲದಂತೆ ಇರುತ್ತದೆ. ನೂರಕ್ಕೆ ಕೊಂಬತೊಂಬತ್ತುಬಾಗ ಸ್ಲಮ್ಸ್‌ಗಳು ಈ ಪತ್ತಿಗೂ ಶೌಚಗೃಹಗಳಿಲ್ಲದೆ ಅಲ್ಲಿಯ ಬಡಜನತೆ ತೊಂದರೆ

ಪಡಂತ್ತಿರುವುದನ್ನು ನಾವು ನೋಡುತ್ತಿರುತ್ತೇವೆ. ರಾಜಾಜಿನಗರದ ಅನೇಕ ಕಡೆಗಳಲ್ಲಿರತಕ್ಕಂತ ಹೆಂಗಸರು ಎಂದರೆಏಷ್ಟೇ ಬಡತನವಿದಲಿ ಮಾನಕ್ಕೆ ಪ್ರಾಧಾನ್ಯತೆ ಕೊಡತಕ್ಕಂಥವರು ಶೌಚಗೃಹಗಳು ಇಲ್ಲದಕಾರಣ ಬಯಲಿನಲ್ಲಿ ಶೌಚಕ್ಕೆ ಕುಳಿತುಕೊಳ್ಳುತ್ತಿರುವ ದೃಶ್ಯವನ್ನು ನಾವು ನೋಡುತ್ತಿರುತ್ತೇವೆ. ಸುಂದರ ನಗರವೆಂದುಹೇಳಿಕೊಳ್ಳತಕ್ಕಂಥ ಈ ಬೆಂಗಳೂರು ನಗರದಲ್ಲಿ ಇಂಟರ್ ನ್ಯಾಷನಲ್ ಕಾನ್‌ಫರೆನ್ಸ್ ವಿೂಟಿಂಗ್ ಮಾಡಬೇಕೆಂದು ಹೇಳತಕ್ಕಂಥ ಈ ನಗರದಲ್ಲಿ ಮಹಿಳೆಯರಿಗೆ ಶೌಚಗೃಹಗಳು ಇಲ್ಲವೆಂದರೆ ಅವರ ಬಗ್ಗೆ ನಿಮಗೆ ಎಷ್ಟರಮಟ್ಟಿನ ಕಳಕಳಿಇದೆ ಎಂದು ತಿಳಿಯುತ್ತದೆ. ಅದರಲ್ಲೂ ಅವರು ಕೇಳತಕ್ಕಂಥದ್ದು ಕನಿಷ್ಟ ಸೌಲಭ್ಯದ ಅನುಕೂಲತೆ. ಮೂರುನೂರು, ನಾಲ್ಕುನೂರು ಸ್ಲಮ್ಸುಗಳಿಗೆ ಶೌಚಗೃಹ ನೀರಿನ ಸೌಲಭ್ಯ ಸ್ನಾನಗೃಹಗಳನ್ನು ಕೊಟ್ಟರೂ ಇದಕ್ಕೆ ಸುಮಾರು ಎರಡು, ಮೂರು ಕೋಟಿ ರೂಪಾಯಿಗಳಷ್ಟು ಖರ್ಚಾಗಬಹುದು. ಬೆಂಗಳೂರು ನಗರದಲ್ಲಿ ತಾರ್ ರಸ್ತೆಯನ್ನು ಮೆನ್‌ಟೈನ್ ಮಾಡುವುದಕೋಸ್ಕರವಾಗಿ ಸಾಮಾರು ಒಂದುಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ಫುಟ್‌ಪಾತ್ ಚದುರಬಿಲ್ಲಿಗಳನ್ನು ಹಾಕುವುದಕ್ಕೋಸ್ಕರವಾಗಿ ಸುಮಾರು ೨೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿರುತ್ತೀರಿ, ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಉಚಿತ ನೀರನ್ನು ಒದಗಿಸುತ್ತಿದ್ದೀರಿ. ಇಷ್ಟೆಲ್ಲ ವ್ಯವಸ್ಥೆ ಮಾಡಲು ಪ್ರೆಯಾರಿಟಿ ಕೊಡುತ್ತಿದ್ದೀರಿ, ಆದರೆ ಸಾಮಾನ್ಯ ಜನರು ಇರತಕ್ಕಂಥ ಸ್ಥಳಗಳಲ್ಲಿ ಆದರಲ್ಲೂ ಬಡಜನರು ಹೆರಿಜನರೇ ಹೆಚ್ಚು ಇರತಕ್ಕಂಥ ಸ್ಥಳಗಳಲ್ಲಿ ನಾಲ್ಕನೇ ದರ್ಜಿನೌಕರರೇ ಜಾಸ್ತಿ ಇರತಕ್ಕಂಥ ಕಡೆಗಳಲ್ಲಿ ಕನಿಷ್ಟ ಮಟ್ಟದ ಸೌಲಭ್ಯವನ್ನೇ ಕೊಟ್ಟಿಲ್ಲವೆಂದರೆ ಇದಕ್ಕಿಂತಲೂ ಒಂದು ದೊಡ್ಡ ಅನಾಗರೀಕತೆ ಬೇರೆ ಯಾವ ರಾಜ್ಯದಲ್ಲೂ ಇಲ್ಲವೆಂದರೆ ತಪ್ಪಾಗಲಾರದು. ಅನೇಕಬಾರಿ ಸ್ಲಮ್ ಕಾನ್‌ಫರೆನ್ ನಡೆದಿರುತ್ತದೆ. ಮಂತ್ರಿಗಳು ಭಾಗವಹಿಸುತ್ತಾರೆ. ಚರ್ಚೆಗಳೂ ನಡೆದಿರುತ್ತವೆ, ಮಾನವೀಯತೆಯ ದೃಷ್ಟಿಯಿಂದ ಸ್ಲಮ್ಸ್‌ನಲ್ಲಿ ವಾಸಮಾಡತಕ್ಕಂಥ ಜನರನ್ನು ನೋಡಿಕೊಳ್ಳಬೇಕು ಅವರಿಗೆ ಎಲ್ಲಾರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತಲೇ ಇರುತ್ತಾರೆ, ಆದರೆ ಕಾರ್ಯತಃ ಅವರಿಗೆ ಯಾವುದೇ ರೀತಿಯಾದ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತ ಇಲ್ಲ. ಈ ವತ್ತಿನದಿವಸ ಬಹುಶ: ನಮ್ಮ ಸರ್ಕಾರದವರು ಅವರನ್ನು ಶೋಷಣೆ ಮಾಡುತ್ತಿದ್ದಾರೆಂದು ಹೇಳಬೇಕಾಗಿದೆ. ಯಾರೇ ಆಗಲಿ ಯಾವುದೇ ರಾಜಕಾರಣಿಗಳಾಗಲಿ ಅವರಬಗ್ಗೆ ಋಣಾತ್ಮಕಾಗಳನ್ನು ಆಡಿ ಬರುತ್ತಾರೆಯೇ ವಿನ: ಈವತ್ತಿನವರೆಗೂ ಯಾವವಿಧವಾದ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ನನ್ನ ಒಂದು ಕ್ಷೇತ್ರವನ್ನು ತೆಗೆದುಕೊಂಡರೆ ಅಲ್ಲಿ ಸುಮಾರು ೧೪ ಸ್ಲಮ್ಸ್‌ಗಳು ಇರುತ್ತವೆ. ಇದರಲ್ಲಿ ೨—೩ ಕಡೆಗಳಲ್ಲಿ ನಾಲ್ಕು ನಾಲ್ಕು ಕಕ್ಕಸ್ಸುಗಳನ್ನು ಕಟ್ಟಿಸಿರುತ್ತಾರೆಯೇ ಹೊರತು ಬೇರೆ ಯಾವರೀತಿಯಾದ ಸೌಲಭ್ಯಗಳನ್ನು ಎಲ್ಲಿಯೂ ಕಟ್ಟಿಸಿಲ್ಲ. ೧೯೫೨ನೇ ಇಸವಿಯಿಂದ ಈಚೆಗೆ ಸುಮಾರು ಐದು ಚುನಾವಣೆಗಳು ನಡೆದಿರುತ್ತವೆ. ಆ ಸಂದರ್ಭದಲ್ಲಿ ಎಲ್ಲ ಸೌಲಭ್ಯಗಳನ್ನು ಕೊಡುತ್ತೇವೆ ಎಂದು ಭರವಸೆಯನ್ನು ಕೊಡುತ್ತಾರೆಯೇ ವಿನ: ಯಾವುದೇ ಸೌಲಭ್ಯವನ್ನು ಕೊಟ್ಟಿಲ್ಲ. ನಿರ್ಭಾಗ್ಯ ಜನತೆಯನ್ನು ಸಮಾಜದಲ್ಲಿ ತೀರ ಕೆಳಮಟ್ಟದಲ್ಲಿರುವವರನ್ನು ಅವರನ್ನು ಚುನಾವಣೆಯ ಸಂದರ್ಭದಲ್ಲಿ ಉಪಯೋಗ ಪಡೆದುಕೊಂಡು ಅನಂತರ ಅವರನ್ನು ಕಡೆಗಾಣಿಸುವುದು ಅಷ್ಟು ಸೂಕ್ತವಲ್ಲವೆಂದು ಹೇಳುತ್ತೇನೆ. ಸುಮಾರು ಈ ವರ್ಷದಲ್ಲಿ ಹತ್ತಾರು ಕಾಗದಗಳನ್ನು ನಗರ ಕಾರ್ಪೊರೇಷನ್‌ನವರಿಗೂ ಬಿ.ಡಿ.ಎ. ರವರಿಗೂ ಬರೆದಿದ್ದೆನೆ. ನಿಜ ಬರೆದ ಕಾಗದಕ್ಕೆ ಸರ್ಕಾರದವರು ಉತ್ತರ ಕೊಟ್ಟಿರುತ್ತಾರೆ.ಸ್ಲಮ್ಸ್‌ಗಳಲ್ಲಿ ವಾಸಮಾಡತಕ್ಕಂಥವರಿಗೆ ಎಲ್ಲಾವಿಧವಾದ ಸೌಲಭ್ಯವನ್ನು ಕೊಡುತ್ತೇವೆಂದುಹೇಳಿ ಕಾಗದದಲ್ಲಿ ಬರೆದಿರುತ್ತಾರೆಯೇ ಹೊರತು ಯಾವವಿದವಾದ ಕೆಲಸ ಆಗಿಲ್ಲವೆಂದು ನಾನು ದುಃಖದಿಂದ ಹೇಳಬೇಕಾಗಿದೆ.

ಮತ್ತೊಂದು ವಿಚಾರವೆಂದರೆ ಈ ವತ್ತಿನದಿವಸ ಸ್ಲಮ್ಸ್‌ಗಳಲ್ಲಿ ಅಪರಾದಗಳ ಸಂಖ್ಯೆಏರಿದೆ. ಬಡವರನ್ನು ಶೋಷಣೆ ಮಾಡತಕ್ಕೆ ಜನರೇ ಆ ಕೊಳಚೆ ಪ್ರದೇಶದಲ್ಲಿದ್ದಾರೆ. ದಾದಾಗಿರಿ ಮಾಡತಕ್ಕವರು ಕೆಲವರಿದ್ದಾರೆ. ಪ್ರತಿಯೊಂದು ಕೊಳಚೆ ಪ್ರದೇಶದಲ್ಲೂ ರಾಜಕೀಯ ಪಕ್ಷದ ಹಿನ್ನೆಲೆಯಲ್ಲಿ ನಿಂತು ಬಡ ಜನರನ್ನು ಶೋಷಣೆ ಮಾಡತಕ್ಕ ಜನರೇನಿದ್ದಾರೆ ಅವರು ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡಿಸುತ್ತಿದ್ದಾರೆ. ಬಡವರಿಂದ ೫೦ ರೂಪಾಯಿ ೧೦೦ ರೂಪಾಯಿ ಅಥವಾ ೨೦೦ ರೂಪಾಯಿ ತೆಗೆದುಕೊಳ್ಳುವುದಲ್ಲದೆ ನೆಲಬಾಡಿಗೆಯನ್ನು ತೆಗೆದುಕೊಳ್ಳುತ್ತಾರೆ. ಪ್ರತಿ ತಿಂಗಳೂ ನೆಲಬಾಡಿಗೆಯನ್ನು ಅವರಿಂದ ವಸೂಲಿ ಮಾಡುವುದಕ್ಕೆ ಕೆಲವು ಪೈಲ್ವಾನರುಗಳನ್ನು ಇವರು ಇಟ್ಟುಕೊಂಡಿದ್ದಾರೆ. ಯಶವಂತಪುರದಲ್ಲಿ ಒಂದು ಕಡೆ ೫೦೦-೬೦೦ ಗುಡಿಸಲುಗಳಿವೆ. ಅಲ್ಲಿ ಆಡಳಿತ ಪಕ್ಷದ ಮುಖಂಡರು ಪ್ರತಿ ತಿಂಗಳೂ ರೆಗ್ಯುಲರಾಗಿ ಒಂದೊಂದು ಗುಡಿಸಿಲಿನವರಿಂದ ೫—೫ ರೂಪಾಯಿಯಂತೆ ೬೦೦ ಗುಡಿಸಿಲಿನವರಿಂದ ಸುಮಾರು ೩ ಸಾವಿರ ರೂಪಾಯಿವರೆಗೆ ಹಣವನು. ವಸೂಲು ಮಾಡುತ್ತಿದ್ದಾರೆ. ದುಡ್ಡು ಕೊಡದೇ ಇದ್ದರೆ ಅಲ್ಲಿಂದ ಅವರನ್ನು

ಖಾಲಿ ಮಾಡಿಸುತ್ತಾರೆ. ಹೀಗೆ ಅಲ್ಲಿ ಒಂದು ರೀತಿಯ ಶೋಷಣೆ ಮಾಡಿಕೊಂಡು ರಾಜಕಾರಣಿಗಳು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕೆಲವು ಹೆಸರುಗಳನ್ನು ಹಾಕಿಕೊಂಡಿದ್ದಾರೆ. ಇಂದಿರಾಗಾಂಧಿ ಸ್ಲಂ ಸಂಜಯ ಗಾಂಧಿ ಸ್ಲಂ, ದೇವರಾಜ ಸ್ಲಂ, ಹೀಗೆ ಹೆಸರುಗಳನ್ನು ಹಾಕಿಕೊಂಡಿದ್ದಾರೆ. ಮಾನ್ಯ ಶ್ರೀ ಕಂಠಯ್ಯನವರ ಹೆಸರಿನಲ್ಲಿ ಇಲ್ಲ ಎಂದು ಕಾಣುತ್ತದೆ.

ಶ್ರೀ ಎಚ್.ಸಿ ಶ್ರೀಕಂಠಯ್ಯ:– ಮುರಾರ್ಜಿ ದೇಸಾಯಿ ಅವರ ಹೆಸರೂ ಇದೆ.

ಶ್ರೀ ಪಿ. ರಾಂದೇವ್:– ದೇವರಾಜ ಅರಸರ ಹೆಸರನ್ನು ನಗರದ ಸುತ್ತಲೂ ಹಾಕಿಕೊಂಡಿದ್ದಾರೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ:– ನಾಳೆ ನಾಡಿದ್ದರಲ್ಲಿ ಮಳ್ಳೂರು ಆನಂದರಾಯರ ಹೆಸರಿನಲ್ಲೂ ಸ್ಲಂ ಬರುತ್ತದೆ.

ಶ್ರೀ ಪಿ. ರಾಂದೇವ್:– ಈ ರೀತಿ ಹೆಸರುಗಳಲ್ಲಿ ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡುತ್ತಿರುವವರು ಯಾರು ಎಂದರೆ ಯಾರು ಆಡಳಿತಪಕ್ಷದಲ್ಲಿದ್ದಾರೆ ಆ ಜನರೇ ಇದನ್ನು ಮಾಡುತ್ತಿದ್ದಾರೆ. ಸ್ಲಂಗಳನ್ನು ಹಾಕಿಸಿ ಆ ಜನರನ್ನು ತಮ್ಮ ಕೈಯ್ಯಲ್ಲಿ ಇಟ್ಟುಕೊಂಡು ದಾದಾಗಿರಿ ಮಾಡಿಕೊಂಡು ಸ್ಲಂಗಳನ್ನು ಬೆಳಿಸುತ್ತಿದ್ದಾರೆ. ಮುಂದೆ ಕೊಳಚೆ ಪ್ರದೇಶಗಳು ಬೆಳೆಯದಹಾಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಪೌರಾಡಳಿತ ಸಚಿವರಾದ ಶ್ರೀಕಂಠಯ್ಯನವರು ಹೇಳುತ್ತಿದ್ದಾರೆ. ಆದರೆ ಅದು ಎಷ್ಟರ ಮಟ್ಟಿಗೆ ಸಫಲವಾಗುತ್ತದೋ ಗೊತ್ತಿಲ್ಲ. ಆದರೆ ಅದಕ್ಕೆ ನಮ್ಮ ಪೂರ್ಣಬೆಂಬಲವಂತೂ ಇದೆ.

ಶ್ರೀ ಎಚ್.ಸಿ. ಶ್ರೀ ಕಂಠಯ್ಯ.—ಈ ಅಧಿವೇಶನದಲ್ಲೇ ಅದಕ್ಕೆ ಒಂದು ಕಾನೂನು ತಂದು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ. ರಾಂದೇವ್:– ನಾನು ೧೫ ವರ್ಷ ಕಾರ್ಪೊರೇಷನ್ನಿನಲ್ಲಿ ಕೌನ್ಸಿಲರಾಗಿದ್ದೆ. ಆದರೆ ನಾನು ಒಂದು ಗುಡಿಸಲನ್ನೂ ಅಕ್ರಮವಾಗಿ ಹಾಕಿಸಿಲ್ಲ. ನಾನು ಮಾನ್ಯ ಶ್ರೀ ಕಂಠಯ್ಯ ನವರಿಗೆ ಹೇಳುತ್ತಿದ್ದೇವೆ ನೀವು ಸ್ಲಂಗಳನ್ನು ಬೆಳಯದಹಾಗೆ ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳುವುದಾದರೆ ಅದಕ್ಕೆ ನಾವು ಪೂರ್ಣ ಬೆಂಬಲವನ್ನು ಕೊಡುತ್ತೇವೆ. ನಾನು ಹಿಂದೆ ಒಂದು ಸಾರಿ ಈಗ ಇರತಕ್ಕ ಕೊಳಚೆಪ್ರದೇಶಗಳಿಗೆ ಪೌರಸೌಲಭ್ಯಗಳನ್ನು ಕೊಡಬೇಕೆಂದು ಒಂದು ನಿರ್ಣಯವನ್ನು ತಂದಿದ್ದೆ. ಆಬಗ್ಗೆ ಮಾನ್ಯ ಮಂತ್ರಿಗಳು ಭರವಸೆಯನ್ನು ನೀಡಿದ್ದರು. ಕೆಲವು ಕನಿಷ್ಟ ಪೌರ ಸೌಲಭ್ಯವನ್ನಾದರೂ ಅವರಿಗೊ ಕೊಡಬೇಕೆಂದು ಕೇಳಿ ಕೊಂಡಿದ್ದೆ. ಆಮೇಲೆ ಕಾರ್ಪೊರೇಷನ್ನಿನವರಿಗೆ ಪತ್ರವನ್ನು ಬರೆದೆ. ಏನೂ ಪ್ರಯೋಜನವಾಗಿಲ್ಲ. ನಾವು ಆಗಾಗ ಆಕಡೆ ಹೋದಾಗ ಜನ ನಮ್ಮನ್ನು ಕೇಳುವುದು ಒಂದೇ ಪ್ರಶ್ನೆ. ಚುನಾವಣೆ ಸಮಯದಲ್ಲಿ ನೀರು ಕೊಡಿಸುತ್ತೇವೆ. ಶೌಚಗೃಹಗಳನ್ನು ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದಿರಿ. ಚುನಾವಣೆ ಆಯಿತು, ನಾವು ಗೆದ್ದುಬಂದಿರಿ, ಆದರೆ ಇದುವರೆಗೂ ನಮಗೆ ಏನೂ ಸೌಕರ್ಯವನ್ನು ಮಾಡಿಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ:– ನೀವು ಎಲ್ಲವನ್ನೂ ಕೊಡಿಸಿದ್ದೀರಿ.

ಶ್ರೀ ಪಿ. ರಾಂದೇವ್:– ಮಾನ್ಯ ಸಚಿವರು ನನ್ನ ಜೊತೆಯಲ್ಲಿ ಬಂದರೆ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅನೇಕ ಕೊಳಚೆಪ್ರದೇಶಗಳಿಗೆ ಸೌಲಭ್ಯಗಳನ್ನು ನೀಡಿಲ್ಲ.

ಶ್ರೀ ಎಚ್.ಸಿ. ಶ್ರೀಕಂಠಯ್ಯ:– ನೀವು ಹೇಳುತ್ತಿರುವುದು ಹೊಸ ಕೊಳಚೆಪ್ರದೇಶದ ವಿಷಯ ಇರಬಹುದು.

ಶ್ರೀ ಪಿ. ರಾಂದೇವ್:– ನಾವು ಯಾವ ಹೊಸ ಕೊಳಚೆಪ್ರದೇಶವನ್ನೂ ಸೃಷ್ಟಿಸಿಲ್ಲ. ಈಗ ಇರತಕ್ಕ ೪೦೦ ಸ್ಲಂಗಳಲ್ಲಿ ಕನಿಷ್ಟಪಕ್ಷ ೧ ಲಕ್ಷ ಗುಡಿಸಲುಗಳಾದರೂ ಇರಬೇಕು. ಅಲ್ಲಿ ಇರತಕ್ಕವರೆಲ್ಲರೂ ಬಡವರೇ ನಲ್ಲ. ಅನೇಕ ಶ್ರೀಮಂತರೂ ಅಲ್ಲಿದ್ದಾರೆ. ಮಧ್ಯಮ ವರ್ಗದವರೂ ಇದ್ದಾರೆ, ಎಕ್ಸ್‌ಪ್ಲಾಯಟೇಷನ್ ಮಾಡತಕ್ಕವರೂ ಇದ್ದಾರೆ. ಇದರಲ್ಲಿ ಕೆಲವರು ನಾಲ್ಕಾರು ಕಡೆಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಮಲ್ಲೇಶ್ವರದಲ್ಲಿ, ಬನಶಂಕರಿಯಲ್ಲಿ. ಕಂಟೋನ್ಮೆಂಟಿನಲ್ಲಿ ಹೀಗೆ ಅನೇಕ ಕಡೆಗಳಲ್ಲಿ ಬೇರೆ ಬೇರೆ ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಆಕೊಳಚೆ ಪ್ರದೇಶದಲ್ಲಿ ವಾಸಮಾಡುವವರಿಗೆ ನೀರು, ಮತ್ತು ಲೈಟನ್ನು ಉಚಿತವಾಗಿ ಕೊಡುತ್ತಿದ್ದೀರಿ. ಯಾವರೀತಿಯಾದ ತೆರಿಗೆಯನ್ನೂ ಅವರು ನೀಡುತ್ತಿಲ್ಲ. ಹಿಂದೆ ಕಾರ್ಪೊ

ರೇಷನ್ನಿನಲ್ಲಿ ಒಂದು ನಿರ್ಣಯವನ್ನು ಮಾಡಿದ್ದೆವು ಅದೇನೆಂದರೆ ಒಂದೊಂದು ಗುಡಿಸಲಿನಿಂದ ಕನಿಷ್ಟ ೧ ರೂಪಾಯಿಯನ್ನಾದರೂ ತೆಗೆದುಕೊಳ್ಳಬೇಕು ಎಂದು. ಆದರೆ ಇನ್ನೂ ಆ ವ್ಯವಸ್ಥೆಯಿಲ್ಲ. ಅವರು ಒಂದು ನಯಾಪೈಸೆಯನ್ನೂ ಕೊಡುವುದಿಲ್ಲ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ ಒಂದೊಂದು ಗುಡಿಸಲಿನಿಂದ ಕನಿಷ್ಠ ಪಕ್ಷ ೫ ರೂಪಾಯಿ ಅಥವಾ ಹತ್ತುರೂಪಾಯಿ ವಸೂಲು ಮಾಡಿ ಅವರಿಗೇ ಜಾಗವನ್ನು ಕೊಡಬೇಕು. ಇಲ್ಲದಿದ್ದರೆ ಅವರು ಯಾವರೀತಿಯಾದ ಜವಾಬ್ದಾರಿಯೂ ಇಲ್ಲದ ನಾಗರಿಕರಾಗಿ ಬೆಳೆದುಕೊಂಡುಬರುತ್ತಾರೆ. ಇನ್ನೊಂದು ಅಂಶವೇನೆಂದರೆ ಪಗಡಿ ಸಿಸ್ಟಂನಲ್ಲಿದೆ ಗುಡಿಸಲುಗಳನ್ನು ಹಾಕಿ ಬೆರೆಯವರಿಗೆ ಅದನ್ನು ಮಾರಿ ಪಗಡಿಗಳನ್ನು ವಸೂಲು ಮಾಡುತ್ತಿದ್ದಾರೆ. ಈ ರೀತಿಯಲ್ಲೂ ಶೋಷಣೆ ಆಗುತ್ತಿದೆ. ಇದಲ್ಲದೆ ಕೆಲವು ವಸೂಲಿದಾರರನ್ನೂ ಮುಖಂಡರುಗಳು ಇಟ್ಟುಕೊಂಡಿದ್ದಾರೆ. ಬಡ ಜನರಿಂದ ಇವರು ಹಣವನ್ನು ವಸೂಲಿ ಮಾಡುತ್ತಾರೆ. ಹೀಗೆ ನಾನಾ ರೀತಿಯಲ್ಲಿ ಬಡವರ ಶೋಷಣೆಯಾಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ಮಲ್ಲೇಶ್ವರದಲ್ಲಿ ಪೈಪ್‌ಲೈನ್‌ನಲ್ಲಿ ಮುನೇಶ್ವರ ಬ್ಲಾಕ್ ಎಂದು ಇದೆ. ಅಲ್ಲಿಸುಮಾರು ೧೫—೨೦ ಸಾವಿರ ಜನರಿದ್ದಾರೆ. ಅಲ್ಲಿಒಂದೇ ಒಂದು ಶೌಚಗೃಹವು ಇಲ್ಲ. ಇದಕ್ಕೆ ಕಾರಣವೇನಿದೆ. ಕೆಲವು ವಸೂಲಿ ಮೆನ್‌ಗಳೇನಿದ್ದಾರೆ ಇವರು ಕೊಳಚೆಪ್ರದೇಶದಲ್ಲಿರುವವರಿಗೆ ಪೌರಸೌಲಭ್ಯಗಳು ಸಿಗದಾಗೆ ಮಾಡುತ್ತಿದ್ದಾರೆ. ಏಕೆಂದರೆ ಪೌರಸೌಲಭ್ಯಗಳು ಸಿಕ್ಕಿಬಿಟ್ಟರೆ ಸಮ್ಮ ಹಿಡಿತದಿಂದ ತಪ್ಪಿಹೋಗಿ ನಮಗೆ ಬರತಕ್ಕ ಓಟುಗಳೂ ಬರುವುದಿಲ್ಲ ಎಂಬ ದೃಷ್ಟಿಯಿಂದ ಅಲ್ಲಿನ ಮುಖಂಡರು ಪೌರಸೌಲಭ್ಯಗಳನ್ನು ಕೊಡದಹಾಗೆ ನೋಡಿಕೊಳ್ಳುತ್ತಿದ್ದಾರೆ. ನೀರಿನ ಸೌಲಭ್ಯವನ್ನು ಕೊಡುವುದಕ್ಕೆ, ದೀಪದ ಸೌಲಭ್ಯವನ್ನು ಕೊಡುವುದಕ್ಕೆ ಇವರು ಅವಕಾಶವನ್ನು ಕೊಟ್ಟಿಲ್ಲ. ಮಾತೆತ್ತಿದರೆ ಕೋರ್ಟಿಗೆ ಹೋಗುತ್ತಾರೆ. ಕಾರ್ಪೊರೇಷನ್ನಿನವರು ಇಂಥವರ ಕೇಸಿದ್ದರೆ ಕೋರ್ಟಿಗೆ ಹೋಗಿ ಕೇಸನ್ನು ಆಟೆಂಡ್ ಮಾಡುವುದಿಲ್ಲ, ಬಡಜನರಿಗೆ ಸಂಬಂಧಪಟ್ಟಂತೆ ಕೇಸ್‌ಗಳಿದ್ದರೆ ಬೇಗ ಡಿಸ್‌ಪೋಸ್ ಮಾಡಿಸುವುದಕ್ಕೆ ಮತ್ತು ಬಡಜನರನ್ನು ಶೋಷಣೆ ಮಾಡುತ್ತಿರುವುದನ್ನು ತಪ್ಪಿಸಿ ಒಳ್ಳೆಯ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಮಾನ್ಯ ಪೌರಾಡಳಿತ ಸಚಿವರು ಗಮನ ಕೊಡಬೇಕು. ಮಾನ್ಯ ಪೌರಾಡಳಿತ ಮಂತ್ರಿಗಳಿಗೆ ಕೆಲಸ ಜಾಸ್ತಿ ಇದೆ. ಇಡೀ ರಾಜ್ಯದ ಹೊಣೆಗಾರಿಕೆ ಅವರಮೇಲಿದೆ. ಕುಡಿಯುವ ನೀರಿನವ್ಯವಸ್ಥೆ ಮಾಡುವುದೇ ಅವರಿಗೆ ದೊಡ್ಡ ತಲೆನೋವಾಗಿದೆ. ಇದಲ್ಲದೆ ರಾಜ್ಯದ ಎಲ್ಲಾ ಮುನಿಸಿಪಾಲಿಟಿಗಳ ಜವಾಬ್ದಾರಿಯೂ ಇದೆ. ಆದ್ದರಿಂದ ಇವರಿಗೆ ಗಮನ ಕೊಡುವುದಕ್ಕೆ ಆಗುತ್ತಿಲ್ಲ ಎಂದು ಕಾಣಿಸುತ್ತಿದೆ. ಈಗ ಸರ್ಕಾರದವರು ಸ್ಲಂ ಕ್ಲಿಯರೆನ್ಸ್ ಬೋರ್ಡ್ ಎಂದು ಮಾಡಿದ್ದೀರಿ. ಈ ಕೊಳಚೆ ನಿರ್ಮೂಲನ ಮಂಡಲಿಯಿಂದ ಯಾವರೀತಿಯಾದ ಕೆಲಸವೂ ಆಗುತ್ತಿಲ್ಲ.

ಶ್ರೀ ಎ.ಲಕ್ಷ್ಮೀಸಾಗರ:— ಅದು ಸ್ಲಂಇಂಪ್ರುಮೆಂಟ್ ಬೋರ್ಡ್ ಆಗಿದೆ.

ಶ್ರೀ ಪಿ. ರಾಂದೇವ್ :— ಹೌದು. ಕೊಳಚೆ ನಿರ್ಮೂಲನ ಮಂಡಲಿ ಏನ್ನುವುದಕ್ಕಿಂತ ಕೊಳಚೆ ಅಭಿವೃದ್ಧಿ ಮಂಡಲಿ ಎಂದು ಹೆಸರು ಕೊಡಬಹುದು. ಅದಕ್ಕೆ ಅಧ್ಯಕ್ಷರನ್ನು ಮಾಡಿದ್ದೀರಿ, ಸದಸ್ಯರುಗಳನ್ನು ಹಾಕಿದ್ದೀರಿ, ಅವರಿಗೆ ಟಿ.ಎ. ಡಿ.ಎ. ಕೊಡುತ್ತಿದ್ದೀರಿ. ಆದರೆ ಕೆಲಸ ಮಾತ್ರ ಏನೂ ಆಗುತ್ತಿಲ್ಲ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದು ಒಳ್ಳೆಯ ಕೆಲಸವನ್ನು ಮಾಡುತ್ತಿದೆ.

ಶ್ರೀ ಪಿ. ರಾಂದೇವ್. — ಸಂಬಳಗಳನ್ನು ಚೆನ್ನಾಗಿ ತೆಗೆದುಕೊಳ್ಳುತ್ತಿದ್ದಾರೆ. ಮತ್ತು ಕೊಳಚೆ ನಿರ್ಮೂಲನ ಮಾಡುವ ಬದಲು ಕೊಳಚೆ ಅಭಿವೃದ್ಧಿ ಮಾಡುವ ಕೆಲಸವನ್ನು ಚೆನ್ನಾಗಿ ಮಾಡುತ್ತಿದ್ದಾರೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್. — ಅದು ಸ್ಲಂ ಕ್ರಿಯೇಶನ್ ಬೋರ್ಡ್.

ಛೇರ್ಮನ್‌ರವರು.—ಈ ರೀತಿಯ ಅಡ್ಡಮಾತುಗಳನ್ನು ದಯವಾಡಿ ಸದಸ್ಯರು ಆಡಬಾರದು.

ಶ್ರೀ ಪಿ. ರಾಂದೇವ್. — ಕೇವಲ ೪೫ ಸಾವಿರ ರೂಪಾಯಿನ ಕೆಲಸವನ್ನು ಒಂದು ವರ್ಷದಲ್ಲಿ ಮಾಡಿದ್ದಾರೆ. ಕೇಳಿದರೆ ಸಮ್ಮ ಹತ್ತಿರ ಫಂಡ್ಸ್ ಇಲ್ಲ ಎಂದು ಹೇಳುತ್ತಾರೆ, ಅವರಿಗೆ ಫಂಡ್ಸ್ ಇಲ್ಲ ಮತ್ತು ಪವರ್ಸ್ ಇಲ್ಲ. ಅಕ್ವಿಸಿಷನ್ ಮಾಡಬೇಕಾದರೆ ಬಹಳ ಕಾಲ ತೆಗೆದುಕೊಳ್ಳುತ್ತದೆ. ನೋಟಿಫಿಕೇಷನ್ ಆಗಬೇಕು, ಆದಾಗಬೇಕು, ಇದಾಗಬೇಕು ಎಂದು ಹೇಳುತ್ತಾರೆ. ಅನೇಕ ನೋಟಿಫಿಕೇಷನ್‌ಗಳು ಬಿದ್ದು ಹೋಗಿವೆ. ಅದನ್ನು ಫಾಲೋ ಅಪ್ ಮಾಡಿಲ್ಲ. ಹೀಗಾಗಿ ಈ ಸ್ಲಂ ಕ್ಲಿಯರೆನ್ಸ್ ಬೋರ್ಡಿನಿಂದ ಕೆಲಸ ಆಗುತ್ತದೆ ಎಂಬ ನಂಬಿಕೆ ನಮಗೆ ಹೊರಟುಹೋಗಿದೆ, ಕಾರ್ಪೊರೇಷನ್‌ಗೆ ಕೊಟ್ಟಿದ್ದೀರಿ, ಅವರು ಕೊಳಚೆ ಪ್ರದೇಶಗಳನ್ನು ಒಂದೆರಡನ್ನಾದರೂ ನಿರ್ಮೂಲನ ಮಾಡಿದ್ದಾರೆ. ಆದರೆ ಕೊಳಚೆ ನಿರ್ಮೂಲನಾ

ಮಂಡಲಿಯವರೂ ಇದುವರೆಗೂ ಯಾವುದೇ ಒಂದೇ ಒಂದನ್ನು ನಿರ್ಮೂಲನ ಮಾಡಿಲ್ಲ. ಅವರನ್ನು ಕೇಳಿದರೆ ನಮಗೆ ಪವರ್ಸ್ ಇಲ್ಲ, ಸರ್ಕಾರದವರು ದುಡ್ಡು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಈಗ ಇರತಕ್ಕಂಥ ಕೊಳಚೆ ಪ್ರದೇಶದ ನಿರ್ಮೂಲನಾ ಮಂಡಲಿಯಿಂದ ಈ ಬಡ ಜನತೆಗೆ ಉತ್ತಮವಾದ ಸೌಲಭ್ಯವನ್ನು ಒದಗಿಸಿಕೊಡುತ್ತದೆ ಎಂಬುವ ನಂಬಿಕೆ ನನಗೂ ಇಲ್ಲವೇ ಇಲ್ಲ. ಮಾನ್ಯ ಶ್ರೀಕಂಠಯ್ಯನವರು ಪೌರಾಡಳಿತ ಮಂತ್ರಿಗಳಾಗಿದ್ದಾರೆ. ಅವರು ಯಾವಾಗಲೂ ಬಿಡುವೇ ಇಲ್ಲದಂತೆ ಕೆಲಸ ಮಾಡುತ್ತಿದ್ದಾರೆ. ಅವರು ರಾಜ್ಯದ ಇತರೇ ಕಡೆಯಲ್ಲಿರುವಂತಹ ಕುಡಿಯುವ ನೀರಿನ ತೊಂದರೆಯ ಬಗ್ಗೆ ತಮ್ಮ ಗಮನವನ್ನು ಹರಿಸಿದರೆ ಸಾಕಾಗಿದೆ. ಆದ್ದರಿಂದ ಇದರ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಈ ಬಡ ಜನರ ಬಗ್ಗೆ ನಿಜವಾಗಿಯೂ ನಿಮಗೆ ಕನಿಕರ ಇದ್ದರೆ ಬೆಂಗಳೂರು ನಗರಕ್ಕೇ ಸಂಬಂಧಪಟ್ಟ ಹಾಗೆ ಒಬ್ಬ ಸ್ಟೇಟ್ ಮಿನಿಸ್ಟರ್ ಎಂಬುದಾಗಿ ಮಾಡಿ, ಅವರು ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನರಿಗೆ ಕನಿಷ್ಟ ಸೌಲಭ್ಯವನ್ನು ಕೊಡುವುದಕ್ಕೆ ಅನುಕೂಲ ಮಾಡಿಕೊಡುವುದು ಒಳ್ಳೆಯದೆಂದು ನನಗನ್ನಿಸುತ್ತಿದೆ. ಏಕೆಂದರೆ ಅವರು ಈ ಒಂದು ವಿಷಯದಲ್ಲೇ ತಮ್ಮ ಗಮನವನ್ನು ಹರಿಸಬಹುದು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನೀವು ಈ ಕಡೆ ಬನ್ನಿ, ನಿಮ್ಮನ್ನೇ ಮಾಡೋಣ.

ಶ್ರೀ ಪಿ. ರಾಮದೇವ್.—ನಾನು ನಿಮ್ಮ ಕಡೆ ಬರುವುದಿಲ್ಲ. ನಿಮ್ಮ ಪಕ್ಷದಿಂದ ಬೆಂಗಳೂರು ನಗರದಿಂದ ಆರಿಸಿ ಬಂದಿರುವವರಲ್ಲಿ ಯಾರನ್ನಾದರೂ ಮಾಡಿ; ಏಕೆಂದರೆ ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ರಾಜ್ಯ ಸರ್ಕಾರ ಒಂದು ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಕೊನೆಯ ಪಕ್ಷ ಒಬ್ಬ ಡೆಪ್ಯುಟಿ ಮಿನಿಸ್ಟರ್ ಎಂಬುದಾಗಿ ಮಾಡಿ ಅವರ ಮುಖಾಂತರ ಈ ರಾಜ್ಯದಲ್ಲಿರತಕ್ಕಂಥ ಕೊಳಚೆ ಪ್ರದೇಶಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಿ, ಅವರಿಗೆ ಕನಿಷ್ಟ ಸೌಲಭ್ಯವನ್ನು ಒದಗಿಸಿಕೊಟ್ಟು ಇರತಕ್ಕಂಥ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡುವುದು ಸೂಕ್ತವೆಂದು ನನಗಾದರೂ ಅನ್ನಿಸುತ್ತದೆ. ನಾನು ೧೯೬೮ನೇ ಇಸವಿಯಿಂದ ಬೆಂಗಳೂರು ನಗರದ ಜನತೆಯ ಸೇವೆಯನ್ನು ಮಾಡಿಕೊಂಡು ಬಂದಿದ್ದೇನೆ. ಕೈಗಾರಿಕಾ ನಗರವಾಗಿರತಕ್ಕಂಥಹ ಬೆಂಗಳೂರು ನಗರಕ್ಕೆ ದಿನೇ ದಿನೇ ಬಲಸೆ ಬರತಕ್ಕಂಥ ಜನ ಬಹಳ ಇದ್ದಾರೆ. ಈ ರೀತಿಯಾಗಿ ಬಲಸೆ ಬರುವುದನ್ನು ಕಡ್ಡಾಯ ನಿಲ್ಲಿಸಿದರೆ ಬಹಳ ಒಳ್ಳೆಯದು. ಇದನ್ನು ಮಹಾರಾಷ್ಟ್ರ ರಾಜ್ಯದ ಮುಂಬಯಿಯಲ್ಲಿ ಮಾಡಿದ್ದಾರೆಂದು ಹೇಳುತ್ತಾರೆ. ಆದರೆ ಅದು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂಬುದು ನನಗೆ ಗೊತ್ತಿಲ್ಲ. ನೆರೆ ರಾಜ್ಯಗಳಿಂದ, ಹಾಗೂ ನಮ್ಮ ರಾಜ್ಯದ ಹಳ್ಳಿಗಳಿಂದ ಹೆಚ್ಚು ಹೆಚ್ಚು ಜನ ಬೆಂಗಳೂರು ನಗರಕ್ಕೆ ಯಾವುದಾದರೂ ಒಂದು ಕೈಗಾರಿಕೆಯಲ್ಲಿ ಕೆಲಸ ಸಿಕ್ಕಬಹುದೆಂಬ ಆಸೆಯನ್ನಿಟ್ಟುಕೊಂಡು ಬರುತ್ತಾರೆ. ಕೆಲವು ಸಲ ಅವರಿಗೆ ಕೆಲಸವೂ ಕೂಡ ಸಿಕ್ಕುತ್ತದೆ. ಆಗ ಅವರಿಗೆ ಇರುವುದಕ್ಕೆ ಮನೆ ಬೇಕು. ಮನೆ ಕಟ್ಟಿಸಿಕೊಡುವ ಬಗ್ಗೆ ಬೆಂಗಳೂರು ನಗರಕ್ಕೆ ರಾಜ್ಯ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಪ್ರಾತಿನಿಧ್ಯ ಕೊಟ್ಟಿಲ್ಲವೆಂದು ಹೇಳುತ್ತೇನೆ. ಬೇರೆಯವರು ನನ್ನನ್ನು ನೀವು ಯಾವಾಗಲೂ ಬೆಂಗಳೂರು ನಗರದ ಬಗ್ಗೆಯೇ ಮಾತನಾಡುತ್ತಾರೆಂದು ಹೇಳಬಹುದು. ಬೆಂಗಳೂರು ನಗರದಲ್ಲಿ ೨೦೦-೩೦೦ ಮನೆಗಳನ್ನು ಮಾತ್ರ ಒಂದು ವರ್ಷಕ್ಕೆ ಹೌಸಿಂಗ್ ಬೋರ್ಡ್ ಮುಖಾಂತರ ಕಟ್ಟಿಸಿದ್ದಾರೆ. ಮನೆಗಳ ಸಮಸ್ಯೆ ಬಹಳ ತೀವ್ರವಾಗಿ ಇರುವುದರಿಂದ ಸ್ಲಂಗಳು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು. ಅವರಿಗೆ ಮನೆಗಳು ಸಿಕ್ಕುವುದಿಲ್ಲ. ಅವರು ಹೋಟೆಲ್‌ಗಳಲ್ಲಿ ರೂಮು ಮಾಡಿಕೊಂಡು ಇರುವುದಕ್ಕೆ ಸಾಧ್ಯವಿಲ್ಲ. ಸ್ಲಂಗಳಲ್ಲಿರತಕ್ಕಂಥ ಗುಡಿಸಲಿಗೆ ಹೋಗುತ್ತಾರೆ. ಈಗ ಹಾಲಿ ಇರತಕ್ಕಂಥ ಅನೇಕ ಸ್ಲಂಗಳಲ್ಲಿ ಡಾಕ್ಟರ್ಸ್‌ಗಳೂ ಕೂಡ ಇದ್ದಾರೆ. ಡಬ್ಬಲ್ ಗ್ರಾಜುಯೇಟ್ಸ್ ಇದ್ದಾರೆ. ಕೆಲವು ಸರ್ಕಾರಿ ಅಧಿಕಾರಿಗಳೂ ಕೂಡ ಸ್ಲಂಗಳಲ್ಲಿದ್ದಾರೆ. ಅವರಿಗೆ ದೊಡ್ಡ ದೊಡ್ಡ ಮನೆಗಳನ್ನು ಕೊಡಬೇಕಾಗಿಲ್ಲ. ಸಣ್ಣ ಪುಟ್ಟ ಮನೆಗಳನ್ನು ಕೊಟ್ಟರೆ ಸಾಕು. ಇದಕ್ಕಾಗಿ ಕೇಂದ್ರ ಸರ್ಕಾರ ೩ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಮಾನ್ಯ ಸಿಕಿಂದರ್ ಭಕ್ತ್‌ರವರು ಬಂದಾಗ ಹೇಳಿದರು. ಆದರ ಜೊತೆಗೆ ರಾಜ್ಯ ಸರ್ಕಾರದವರು ಹಲವಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸ್ಲಂಗಳ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ಖರ್ಚು ಮಾಡಿ ಮನೆಗಳನ್ನು ಕಟ್ಟಿದರೆ ಬಹುಶಃ ನಮ್ಮ ಈ ಒಂದು ಸ್ಲಂಗಳನ್ನು ಇನ್ನು ಮುಂದೆ ಬೆಳೆಯದಂತೆ ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಯಲ್ಲಿ ಇವತ್ತಿನ ದಿವಸ ನಮಗೆ ಇನ್ನೊಂದು ತೊಂದರೆ ಬಂದಿದೆ. ಅದೇನೆಂದರೆ ಸೋಷಿಯೋ ಎಕನಾಮಿಕ್ಸ್ ಸರ್ವೀಸ್ ಆಫ್

ಬ್ಯೂರೋದವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳಿಂದ ಕಳ್ಳತನ ದರೋಡೆ, ಮಾನಭಂಗ, ಕೊಲೆ ಇವುಗಳು ಶೇಕಡ ೪೮ಷ್ಟು ಹೆಚ್ಚಾಗಿವೆ. ಇದಕ್ಕೆ ಕಾರಣ ವೇನೆಂದರೆ ಅವರ ಆರ್ಥಿಕ ಪರಿಸ್ಥಿತಿ ಸರಿಯಾಗಿರುವುದಿಲ್ಲ. ಸಮಾಜದಲ್ಲಿ ಅವರಿಗೆ ಸ್ಥಾನವಿಲ್ಲ. ಅವರ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿದೆ. ಅವರಿಗೆ ಕೆಲಸವಿಲ್ಲ. ಈ ಎಲ್ಲ ಕಾರಣಗಳಿಂದ ಅಪರಾಧಗಳು ಜಾಸ್ತಿಯಾಗಿದೆ ಎಂಬುದಾಗಿ ಹೇಳುತ್ತಾರೆ. ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡುವ ಬಗ್ಗೆ ಬಾಯಿ ಮಾತಿನಲ್ಲಿ ಹೇಳಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರ ಜೊತೆಯಲ್ಲಿ ಅಂಕಿ ಅಂಶಗಳನ್ನೂ ಕೂಡ ಕೊಟ್ಟಿದ್ದೇವೆ. ಆಕ್ಟೋಬರ್ ೧೯೭೮ರಿಂದ ಬೇಕಾದಷ್ಟು ಗುಡಿಸಲುಗಳು ಜಾಸ್ತಿಯಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದವರು ಈ ಕೊಳಚೆ ಪ್ರದೇಶಗಳು ಬಿ.ಡಿ.ಎ.ಗೆ ಸಂಬಂಧಪಟ್ಟಂತಹ ಜಾಗದಲ್ಲಿದ್ದರೆ, ಅಥವಾ ಕಾರ್ಪೊರೇಷನ್ ಜಾಗದಲ್ಲಿದ್ದರೆ ಅಥವಾ ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನ ಜಮೀನಿನಲ್ಲಿದ್ದರೆ ಆಯಾ ಸಂಸ್ಥೆಯವರೇ ಅಲ್ಲಿರತಕ್ಕಂಥ ಗುಡಿಸಲು ವಾಸಿಗಳಿಗೆ ಕನಿಷ್ಟ ಸೌಲಭ್ಯವನ್ನು ಒದಗಿಸಿಕೊಡತಕ್ಕಂಥಾದ್ದು ಅವರ ಜವಾಬ್ದಾರಿ ಎಂಬುದಾಗಿ ಸರ್ಕಾರ ತೀರ್ಮಾನ ತೆಗೆದು ಕೊಂಡಿದೆ ಎಂದು ಕೇಳಿದ್ದೇನೆ. ಇದನ್ನು ನಗರ ಕಾರ್ಪೊರೇಷನ್‌ನವರು ಏನಾದರೂ ಅಲ್ಪ ಸ್ವಲ್ಪ ಸೌಕರ್ಯಗಳನ್ನು ಈ ಗುಡಿಸಲು ವಾಸಿಗಳಿಗೆ ಒದಗಿಸಿ ಕೊಡುತ್ತಾರೆ. ಆದರೆ ಬಿ. ಡಿ. ಎ. ಹಾಗೂ ಕೊಳಚೆ ಪ್ರದೇಶದ ನಿರ್ಮೂಲನ ಮಂಡಲಿಯವರು ಯಾವುದನ್ನೂ ಮಾಡುವುದಿಲ್ಲ. ಸ್ಲಂ ಕ್ಲಿಯರೆನ್ಸ್ ಬೋರ್ಡಿನವರು ಕೆಲವು ಗುಡಿಸಲು ವಾಸಿಗಳಿಗೆ ಈಗಾಗಲೇ ಒದಗಿಸಿರತಕ್ಕಂಥ ನೀರಿನ ಶುಲ್ಕವನ್ನು ಕಟ್ಟಿಲ್ಲ. ಇದರಿಂದ ನೀರಿನ ಕನೆಕ್ಷನ್ ಕಿತ್ತು ಹಾಕಿದ್ದಾರೆ. ಈ ಮೂರು ಏಜೆನ್ಸಿಗಳು ಕೋ-ಆರ್ಡಿನೇಟ್ ಆಗಿ ಕೆಲಸ ಮಾಡುವುದು ಒಳ್ಳೆಯದು. ಇದಕ್ಕಾಗಿ ಒಂದು ಮಾಸ್ಟರ್ ಪ್ಲಾನ್ ಮಾಡಿ ಸ್ಲಂಗಳ ಬಗ್ಗೆ ಈ ಮೂರು ಏಜೆನ್ಸಿಗಳಿಗೂ ಜವಾಬ್ದಾರಿಯನ್ನು ಕೊಟ್ಟು ವರ್ಷಕ್ಕೆ ಇಷ್ಟು ಪ್ರೊಗ್ರೆಸ್ ಕೊಡಬೇಕೆಂದು ಒಂದು ಕಡ್ಡಾಯ ನಿರ್ಬಂಧವನ್ನು ಹಾಕಿದರೆ ಒಳ್ಳೆಯದೇ ಹೊರತು ಸುಮ್ಮನೆ ತಾವು ಆ ರೀತಿ ಹೇಳಿದರೆ ಅವರು ಯಾರೂ ಇದರ ಕಡೆಗೆ ಗಮನ ಕೊಡುವುದಿಲ್ಲ. ಅವರು ಈಗ ಬರೀ ಕಂಟ್ರಾಕ್ಟದಾರರಿಗೆ ಅನುಕೂಲ ಮಾಡುವ ಕಡೆಗೆ ತಮ್ಮ ಗಮನವನ್ನು ಹರಿಸುತ್ತಿದ್ದಾರೆ. ಗುಡಿಸಲುಗಳಲ್ಲಿ ಯಾವುದಾದರೂ ಒಂದು ಕಕ್ಕಸ್ಸು ಮನೆ, ಕಟ್ಟಿ ಎಂಬುದಾಗಿ ಕಂಟ್ರಾಕ್ಟದಾರರಿಗೆ ಹೇಳಿದರೆ ಅದಕ್ಕೆ ಅವರು ಒಪ್ಪುವುದಿಲ್ಲ. ಏಕೆಂದರೆ ಅಲ್ಲಿ ಮಾಡಿದರೆ ಅವರಿಗೆ ದುಡ್ಡು ಬರುವುದಿಲ್ಲ. ಎಲ್ಲಿ ಲಕ್ಷಾಂತರ ರೂಪಾಯಿ ಹಣ ಬರುತ್ತದೆಯೋ ಅಂದರೆ ಪುಟ್‌ಪಾತಿನಲ್ಲಿ ಕಲ್ಲುಗಳನ್ನು ಹಾಕಿಸುವುದು, ಪೌರಿ ಕಟ್ಟಿಸುವುದು ಮುಂತಾದ ಹಣ ಬರುವ ಕಡೆ ಹೆಚ್ಚು ಗಮನ ಕೊಡುತ್ತಾರೆ. ಇಂತಹ ಸಣ್ಣ ಪುಟ್ಟ ಕೆಲಸದ ಕಡೆಗೆ ಯಾರೂ ಗಮನ ಕೊಡುವುದಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳು ಬಹಳ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ಈ ಮೂರು ಏಜೆನ್ಸಿಗಳೇನಿವೆ, ಅವುಗಳನ್ನು ಮೆಟ್ರೋಪಾಲಿಟನ್ ಕೌನ್ಸಿಲ್ ತರಹ ಮಾಡಿ ಅವರಿಗೆ ಅಧಿಕಾರವನ್ನು ಕೊಟ್ಟು ಇಷ್ಟು ದಿವಸಗಳಲ್ಲಿ ಇಷ್ಟು ಕೆಲಸಗಳಾಗಬೇಕೆಂಬ ಒಂದು ನಿರ್ಬಂಧವನ್ನು ಹಾಕಿ ಅದಕ್ಕೆ ತಕ್ಕ ಅನುಕೂಲಗಳನ್ನು ಒದಗಿಸಿಕೊಟ್ಟರೆ ಈ ಮಾನವೀಯತೆಯ ಪ್ರಶ್ನೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನನಗನ್ನಿಸುತ್ತದೆ. ನನಗೆ ತಿಳಿದ ಹಾಗೆ ಕಾರ್ಪೊರೇಷನ್ನಿನವರು ವರ್ಷ ವರ್ಷಕ್ಕೂ ೫೦-೬೦ ಲಕ್ಷ ರೂಪಾಯಿಗಳನ್ನು ಕೆಲವು ಸಾರಿ ಒಂದು ಕೋಟಿ ರೂಪಾಯಿಗಳವರೆಗೂ ಖರ್ಚು ಮಾಡಿದ್ದಾರೆ. ಒಂದು ಭಾರಿ ಎಕನಾಮಿಕ್ ಸರ್ವೆ ಎಂಬುದಾಗಿ ಮಾಡಿದ್ದರು ಅದು ಏನಾಯಿತೋ ಗೊತ್ತಾಗಲಿಲ್ಲ. ಇದರ ಬಗ್ಗೆ ಕಾರ್ಪೊರೇಷನ್‌ನವರು ಸರ್ವೆ ಮಾಡಿದ್ದನ್ನು ಇದುವರೆಗೂ ಪತಕ್ಕಾಗಿ ಜಾರಿಗೆ ಕೊಟ್ಟಿಲ್ಲ? ಆವರಣ ನೈರ್ಮಲ್ಯಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಕಾರ್ಪೊರೇಷನ್ ಖರ್ಚು ಮಾಡಿದ್ದಾರೆ. ಶೇಕಡ ೧೮ ಭಾಗದಂತೆಯೇ ಖರ್ಚು ಮಾಡಿದ್ದಾರೆ. ಆದರೆ ಇದರಿಂದ ಯಾರಿಗೆ ಅನುಕೂಲವಾಗಬೇಕೋ ಅವರಿಗೆ ಆ ಸೌಲಭ್ಯ ಸಿಕ್ಕಿಲ್ಲ. ಆವರಣ ನೈರ್ಮಲ್ಯ ಎಂದರೆ ರಸ್ತೆಯಲ್ಲಿರುವ ಪುಟ್‌ಪಾತಿಗೆ ಚಪ್ಪಡಿ ಕಲ್ಲನ್ನು ಹಾಕಂವುದಿಲ್ಲ. ಮೂಲಭೂತ ಸೌಲಭ್ಯ ಅಂದರೆ ಲೈಟು, ಸ್ನಾನದಮನೆ, ಹೆಣ್ಣು ಮಕ್ಕಳು ಸ್ನಾನ ಮಾಡುವುದಕ್ಕೆ ಅನುಕೂಲವನ್ನು ಒದಗಿಸಿಕೊಡಬೇಕು. ಒಂದು ಕೊಳಚೆ ಪ್ರದೇಶದಲ್ಲಿ ಸುಮಾರು ೫ ಲಕ್ಷ ಜನಸಂಖ್ಯೆ ಇದ್ದರೆ ಅದರಲ್ಲಿ ಕೇವಲ ಒಂದು ಲಕ್ಷ ಹೆಂಗಸರೇ ಇರುತ್ತಾರೆ. ಅವರು ಸ್ನಾನ ಮಾಡುವುದಕೆ ಅನುಕೂಲವಿಲ್ಲದೆ, ಅವರು ಸ್ನಾನ ಮಾಡಿ ವರ್ಷಾನುಗಟ್ಟಲೆ ಯಾಗಿರುತ್ತದೆ. ನಾವು ಆ ಕಡೆ ಹೋದಾಗ ಅವರು ನಮ್ಮನ್ನು ಬಂದು ಕೇಳುವುದೇನೆಂದರೆ ಸ್ವಾಮಿ ನಮಗೆ ಆರಮನೆಯನ್ನು ಕಟ್ಟಿಸಿಕೊಡಬೇಡಿ. ಸ್ನಾನ ಮಾಡುವುದಕ್ಕೆ ಅನುಕೂಲವನ್ನು ಒದಗಿಸಿಕೊಟ್ಟರೆ ಸಾಕು ಎಂಬುದಾಗಿ ಹೇಳುತ್ತಾರೆ. ನನಗೆ ತಿಳಿದಂತೆ ಒಂದೆರಡು ಕಡೆ ಬಿಟ್ಟರೆ ಇನ್ನುಳಿದ ಕಡೆಯಲ್ಲೆಲ್ಲಾ

ಸ್ನಾನದ ಮನೆಯೇ ಇಲ್ಲ. ನಿಮಗೆ ಬಡ ಜನರ ಬಗ್ಗೆ ನಿಜವಾಗಿಯೂ ಕಳಕಳಿ ಇದ್ದಲ್ಲಿ, ಮೂಲಭೂತ ಸೌಲಭ್ಯವನ್ನು ಅವರಿಗೆ ಮೊದಲು ಒದಗಿಸಿಕೊಡಿ ಇನ್ನೇನು ಕಾರ್ಪೊರೇಷನ್ ಚುನಾವಣೆ ಬೇರೆ ಬರುತ್ತಿದೆ. ಆಗ ನಾವು ನೀವು ಇಬ್ಬರೂ ಅವರ ಹತ್ತಿರ ಓಟಿಗಾಗಿ ಹೋಗಬೇಕಾಗುತ್ತದೆ. ಅವರು ನಿಮ್ಮನ್ನು ಕಳೆದ ಹಲವಾರು ವರ್ಷಗಳಿಂದ ನಮಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರೆಂದು ಕೇಳುತ್ತಾರೆ ? ನಮ್ಮನ್ನು ಕಳೆದ ೨ ವರ್ಷಗಳಿಂದ ಏನು ಅನುಕೂಲವನ್ನು ಒದಗಿಸಿಕೊಟ್ಟಿದ್ದೀರೆಂದು ಕೇಳುತ್ತಾರೆ ? ಆದ್ದರಿಂದ ನಿಮಗೆ ಈ ಬಡ ಜನರ ಬಗ್ಗೆ ನಿಜವಾಗಿಯೂ ಕಳಕಳಿ ಇದ್ದರೆ ಒಂದು-ಒಂದೂವರೆ ಕೋಟಿ ರೂಪಾಯಿಗಳಾದರೂ ಚಿಂತೆಯಿಲ್ಲ, ಅದನ್ನು ಖರ್ಚು ಮಾಡಿ ಅವರಿಗೆ ಮೊದಲು ಮೂಲಭೂತ ಸೌಲಭ್ಯ ಒದಗಿಸಿಕೊಡಿ ಅದನ್ನು ತಾವು ಕೂಡ ಒಪ್ಪಿಕೊಂಡಿದ್ದೀರಿ. ಅದನ್ನು ಮೊದಲು ಮಾಡಿಕೊಡಿ. ನನಗೆ ತಿಳಿದ ಹಾಗೆ ಒಂದು ಕೋಟಿ ರೂಪಾಯಿಗಳಲ್ಲಿ ಈ ಕೆಲಸವನ್ನು ಮಾಡಬಹುದೆಂದು ಹೇಳುತ್ತೇನೆ.

೧೨-೩೦ ಪಿ. ಎಂ.

ಈಪೊತ್ತು ಸ್ಲಂಸ್‌ಗಳು ಬೆಳೆಯಲು ಕಾರಣ ಇಲ್ಲಿ ಹೆಚ್ಚು ಕೈಗಾರಿಕೆಗಳು ಬೆಳೆಯುತ್ತಾ ಇರುವುದರಿಂದ. ಕೈಗಾರಿಕಾ ಆಕ್ಟ್ ಪ್ರಕಾರ ಮೂರನೇ ಒಂದು ಭಾಗದಷ್ಟು ನೌಕರರಿಗೆ ಅವರು ಮನೆಗಳನ್ನು ಕಟ್ಟಿಕೊಡಬೇಕು ಅಂತ ಇದೆ. ಯಾವ ಫ್ಯಾಕ್ಟರಿಯವರೂ ಕೂಡ ಇದನ್ನು ಸರಿಯಾದ ಆಚರಣೆಗೆ ತಂದಿಲ್ಲ ಅವರು ಕಟ್ಟಿ ಕೊಟ್ಟಿಲ್ಲಾ. ಇಷ್ಟೇ ಅಲ್ಲದೆ ಅವರಿಗೆ ಮೂಲಭೂತ ಸೌಲಭ್ಯ ಅಂದರೆ ನೀರು, ವಿದ್ಯುಚ್ಛಕ್ತಿ ಸೌಲಭ್ಯವನ್ನಾದರೂ ಕೊಡಬೇಕು. ಅದನ್ನೂ ಕೊಟ್ಟಿಲ್ಲಾ. ಯಾರೇ ಆಗಲಿ ಇದನ್ನು ಜಾರಿಗೆ ತರಬಾರದೇ ಎಂದು ನಾನು ಕೇಳಿಕೊಳ್ಳುತ್ತೇನೆ. ಅವರು ಇದನ್ನು ಸರಿಯಾಗಿ ಜಾರಿಗೆ ತಂದಿದ್ದರೆ ಇವೊತ್ತಿನ ದಿವಸ ಕೊಳಚೆ ಪ್ರದೇಶಗಳ ಸಮಸ್ಯೆ ಬಹಳ ಕಡಿಮೆಯಾಗಿರುತ್ತಿತ್ತು. ಅಲ್ಲದೆ ಗೃಹ ಸಮಸ್ಯೆ ಕೂಡ ಸ್ವಲ್ಪ ಮಟ್ಟಿಗೆ ನಿವಾರಣೆಯಾಗುತ್ತಿತ್ತು. ಯಾರೇ ಆಗಲಿ ಫ್ಯಾಕ್ಟರಿ ಆಕ್ಟ್ ಪ್ರಕಾರ ಅವರು ಮೂರನೇ ಒಂದು ಭಾಗದಷ್ಟು ಮನೆಗಳನ್ನು ಲೇಬರರ್ಸ್‌ಗೆ ಕಟ್ಟಿಕೊಡುವುದಲ್ಲದೆ ಅವರಿಗೆ ಬೇಸಿಕ್ ಎಮಿನಿಟೀಸ್ ಆಗಿರತಕ್ಕಂಥಾ ವಾಟರ್, ಮತ್ತು ಲೈಟ್ಸ್ ಸೌಲಭ್ಯವನ್ನು ಒದಗಿಸಿಕೊಡುವಂತೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ತಮಗೆ ಒಂದು ಉದಾಹರಣೆ ಹೇಳುವುದಾದರೆ ಮೈಕೋ ಕಾರ್ಖಾನೆಯವರು ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ. ಅದೇ ರೀತಿ ಇನ್ನೂ ಕೆಲವು ಖಾಸಗೀ ಕಾರ್ಖಾನೆಗಳು ಇವೆ ಮತ್ತು ಇದರ ಜೊತೆಗೆ ಇನ್ನೂ ಒಂದೆರಡು ಕೇಂದ್ರ ಸರ್ಕಾರದ ಕಾರ್ಖಾನೆಗಳು ಸ್ಥಾಪನೆಯಾಗುವುದರಲ್ಲಿದೆ. ಇವೆಲ್ಲವೂ ಕೂಡ ಕೋಟ್ಯಾಂತರ ರೂಪಾಯಿಯನ್ನು ಸಂಪಾದನೆ ಮಾಡುತ್ತಿವೆ. ಇಲ್ಲಿ ಕಡ್ಡಾಯವಾಗಿ ಮನೆಗಳನ್ನು ಕಟ್ಟಿ ಅವರವರ ನೌಕರರಿಗೆ ನೀಡುವಂತೆ ಒತ್ತಾಯ ಮಾಡಬೇಕು ಹಾಗೆ ಮಾಡಿದರೆ ಮಾತ್ರ ಕೊಳಚೆ ಪ್ರದೇಶಗಳು ಬೆಳೆಯುವುದಕ್ಕೆ ಅವಕಾಶ ಇರುವುದಿಲ್ಲಾ. ಅದೇ ರೀತಿಯಾಗಿ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರೂ ಕೂಡ ತಮ್ಮ ನೌಕರರುಗಳಿಗೆ ಮನೆ ಕಟ್ಟಿಕೊಡುವಂಥಾ ಒಂದು ವ್ಯವಸ್ಥೆ ಮಾಡಬೇಕು. ಈಪೊತ್ತಿನ ದಿವಸ ಕೇಂದ್ರ ಸರ್ಕಾರದ ಅನೇಕ ಎಸ್ಟಾಬ್ಲಿಷ್‌ಮೆಂಟ್ಸ್‌ಗಳು ಮತ್ತು ಕಾರ್ಖಾನೆಗಳು ನಮ್ಮ ನಗರದಲ್ಲಿದೆ. ಅವರು ತಮ್ಮ ನೌಕರರಿಗೆ ಮನೆಗಳು ಕಟ್ಟಿಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಈಪೊತ್ತಿನ ದಿವಸ ನಮ್ಮ ಬೆಂಗಳೂರು ನಗರದಲ್ಲಿ ಈ ಮನೆಗಳು ಎಷ್ಟು ಬೇಕಾಗಿದೆ ಎಂದರೆ ಕನಿಷ್ಟಪಕ್ಷ ಒಂದು ಲಕ್ಷದಷ್ಟಾದರೂ ಮನೆಗಳು ಬೇಕು. ಇದರ ಜೊತೆಗೆ ಪ್ರತಿವರ್ಷ ೨೫ಸಾವಿರ ಗುಡಿಸಲು ವಾಸಿಗಳಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥಾ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಈ ಬಗ್ಗೆ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಮತ್ತು ಕಾರ್ಖಾನೆಗಳು ಒತ್ತಾಯ ಮಾಡಿ ಆ ಲೇಬರರ್ಸ್‌ಗೆ ಮನೆಗಳನ್ನು ಕಟ್ಟಿಕೊಡುವಂತೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅನೇಕ ಡಿಫೆನ್ಸ್ ಎಸ್ಟಾಬ್ಲಿಷ್‌ಮೆಂಟ್ಸ್ ಇಲ್ಲಿಗೆ ಬರುತ್ತಾ ಇವೆ. ಹತ್ತಾರು ಡಿಫೆನ್ಸ್ ಡಿಪಾರ್ಟ್‌ಮೆಂಟ್ಸ್‌ಗಳು ಇಲ್ಲಿ ಇವೆ ಎಂ.ಇ.ಜಿ. ಮತ್ತು ರೇಡಿಯೋ ಎಲೆಕ್ಟ್ರಾನಿಕ್ಸ್, ಈ ರೀತಿ ಬೇಕಾದಷ್ಟು ಇವೆ. ಅವರೂ ಕೂಡ ತಮ್ಮ ಲೇಬರರ್ಸ್‌ಗೆ ಏನು ಮನೆಗಳನ್ನು ಕಟ್ಟಿಕೊಡಬೇಕೋ ಅದನ್ನು ಕಟ್ಟಿಕೊಡುತ್ತಾ ಇಲ್ಲಾ. ಈಗ ಜಾಲಹಳ್ಳಿ ಬೆಳೆಯುತ್ತಾ ಇದೆ ಅಲ್ಲದೆ ಒಂದು ಡಿಫೆನ್ಸ್ ಸೆಂಟರ್ ಆಗುತ್ತಾ ಇದೆ. ಆದುದರಿಂದ ಕನಿಷ್ಟಪಕ್ಷ ಅವರ ನೌಕರರಿಗಾದರೂ ಮನೆಯನ್ನು ಕಟ್ಟಿಕೊಡಲೇಬೇಕು ಎಂದು ತಾವು ಒತ್ತಾಯ ಮಾಡಬೇಕು. ಈವೊತ್ತಿನ ದಿವಸ ನೀವು ಹಾಗೆ ಮಾಡದೇ ಹೋದರೆ ಬೆಂಗಳೂರು ನಗರದಲ್ಲಿ ಹೆಚ್ಚಾಗಿ ಸ್ಲಮ್ಸ್‌ಗಳು ಬೆಳೆಯುವುದಕ್ಕೆ ನೀವೇ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಎಂದು

ಹೇಳಬೇಕಾಗುತ್ತದೆ. ಅಲ್ಲದೆ ಮಾನ್ಯ ಮುಖ್ಯ ಮಂತ್ರಿಗಳು ಈಗ್ಗೆ ಸ್ವಲ್ಪ ದಿವಸದ ಹಿಂದೆ ಒಂದು ಮಾತು ಹೇಳಿದರು. ಏನೆಂದರೆ ಬಹಳ ವೈಭವಯುತವಾಗಿ ಕಟ್ಟಿದಂಥಾ ಮನೆಗಳಿಗೆ ಹೆಚ್ಚು ತೆರಿಗೆ ಹಾಕಬೇಕಂ ಮತ್ತು ಅದನ್ನು ತಡೆಗಟ್ಟಬೇಕು ಎನ್ನುವ ಮಾತನ್ನು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ, ಏತ ಕ್ಕೆಂದರೆ ೪-೫ ಜನವಾಸ ಮಾಡಲು ಇರುವುದಕ್ಕೆ ೫-೬ಲಕ್ಷ ರೂಪಾಯಿ ಖರ್ಚು ಮಾಡಿ ಮನೆ ಕಟ್ಟುತ್ತಾರೆ ಇಷ್ಟೊಂದು ಹಣವನ್ನು ಇನ್‌ವೆಸ್ಟ್ ಮಾಡಿ ಭೋಗ ವೈಭವ ಜೀವನ ಮಾಡುವ ಬದಲು ಸ್ವಂತವಾಸಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಮೀರದಂತೆ ಒಂದು ಮನೆ ಕಟ್ಟಿಕೊಂಡು ಇನ್ನುಳಿದ ಹಣದಲ್ಲಿ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಡಲಿ. ಹಾಗಾದರೆ ಹೆಚ್ಚು ಕೊಳಚೆ ಪ್ರದೇಶಗಳು ಬೆಂಗಳೂರು ನಗರದಲ್ಲಿ ಬೆಳೆಯಲು ಅವಕಾಶ ಇರುವುದಿಲ್ಲಾ. ಈವೊತ್ತಿನ ದಿವಸ ಬೆಂಗಳೂರಿನಲ್ಲಿ ಒಂದು ಸಣ್ಣ ಮನೆಗೆ, ೨-೩ ಚದರ ಗಜ ಇರತಕ್ಕಂಥಾ ಮನೆಗೆ ಬಾಡಿಗೆಗೆ ಕೇಳಿದರೆ ೨೦೦-೩೦೦ ರೂಪಾಯಿ ಕೊಡಬೇಕಾಗಿದೆ ಅಲ್ಲದೆ ೪-೫ ಸಾವಿರ ರೂಪಾಯಿ ಪಗಡಿ ಬೇರೆ ಕೇಳುತ್ತಾರೆ. ಹೀಗಿರುವಾಗ ನಾಲ್ಕನೇ ದರ್ಜೆಯ ನೌಕರರಿಗೆ ೪೦೦ ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕಂಥಾ ನೌಕರರಿಗೆ ಯಾರಿಗೆ ತಾನೇ ಮನೆ ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಹೇಳಿ. ಇಷ್ಟೇ ಅಲ್ಲದೆ ಬೆಂಗಳೂರು ನಗರದಲ್ಲಿ ಮನೆಗಳ ಒಂದು ಕೊರತೆಗೆ ಕಾರಣ ಲ್ಯಾಂಡ್ ವ್ಯಾಲ್ಯೂ ಸಿಕ್ಕಾಪಟ್ಟೆ ಆಗಿರುವುದರಿಂದಲೂ ಆಗಿದೆ. ಈಗ್ಗೆ ೨-೩ ವರ್ಷದ ಹಿಂದೆ ಈ ಬಗ್ಗೆ ಒಂದು ಹತೋಟಿಗೆ ಬಂದಿತ್ತು. ಈವೊತ್ತು ನೋಡಿದರೆ ಚದರ ಗಜ ಒಂದಕ್ಕೆ ೧೫೦-೨೦೦ ರೂಪಾಯಿಗೆ ಬಂದಿದೆ. ಹೀಗಿರುವಾಗ ಬಡವರು ಸೈಟುಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟುವುದಕ್ಕೆ ಹೇಗಾ ಗುತ್ತದೆ ಬಿ.ಡಿ.ಎ. ನವರೇನೋ ಸೈಟುಗಳನ್ನು ಕೊಡುತ್ತಾರೆ. ಅದೂ ಕೂಡ ಮೊದಲಿಗಿಂತ ಬೆಲೆ ಜಾಸ್ತಿಯಾಗಿದೆ, ಖಾಸಗಿಯವರು ಪ್ರೈವೇಟ್ ಲೇಔಟ್‌ಗಳನ್ನಾಗಿ ಮಾಡಿ ನಿವೇಶನಗಳನ್ನು ಕೊಡುತ್ತಿ ದ್ದಾರೆ ಅದರ ಬೆಲೆಯೂ ಜಾಸ್ತಿಯಾಗಿದೆ. ಇವೆಲ್ಲಾ ಕಾರಣದಿಂದ ಈವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ಸ್ಲಂಗಳು ಜಾಸ್ತಿಯಾಗಿವೇ ಹೊರತು ಇನ್ನೇನೂ ಅಲ್ಲಾ. ಈ ಜಮೀನುಗಳ ಬೆಲೆ ಜಾಸ್ತಿಯಾ ಗದಂತೆ ಇದ್ದಹಾಗೆ ಮಾಡಬೇಕು ಮತ್ತು ಲ್ಯಾಂಡ್ ಆಕ್ವಿಸಿಷನ್ ಆಕ್ಟ್‌ಗೆ ಒಂದು ಸೂಕ್ತವಾದ ತಿದ್ದುಪಡಿ ತಂದು, ಬೆಲೆಗಳು ಜಾಸ್ತಿಯಾಗದಂತೆ ಮಾಡಬೇಕು ಬಾಡಿಗೆ ಜಾಸ್ತಿಯಾಗದಂತೆ ಬಾಡಿಗೆ ನಿಯಂತ್ರಣ ಕಾನೂನಿಗೆ ತಿದ್ದುಪಡಿ ಮಾಡಬೇಕು. ಬಸವಲಿಂಗಪ್ಪನವರು ಈ ರೀತಿ ತಿದ್ದುಪಡಿ ತರುವುದಾಗಿ ಹೇಳಿ ದ್ದರು. ಆದರೆ ಆ ಬಗ್ಗೆ ತಿದ್ದುಪಡಿ ಇದುವರೆಗೂ ತಡೆ ತರಲಿಲ್ಲ. ಶೀಘ್ರ ತಿದ್ದುಪಡಿ ತರಬೇಕೆಂದು ಹೇಳುತ್ತೇನೆ. ಈ ಬಗ್ಗೆ ಸೂಕ್ತವಾದ ಒಂದು ತಿದ್ದುಪಡಿ ತಂದರೆ ಈ ಸ್ಲಂಸ್ ಡ್ವೆಲರ್ಸ್ ಬಗ್ಗೆ ಬೆಂಗಳೂರು ನಗರ ಮತ್ತು ಬೆಂಗಳೂರು ಸುತ್ತ ಮುತ್ತ ಇರತಕ್ಕಂಥಾ ನಾಗರೀಕರ ಬವಣೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನನಗೆ ಅನಿಸುತ್ತದೆ. ಈ ಬಗ್ಗೆ ತಾವು ಗಮನ ಕೊಡಬೇಕು ಎಂದು ಹೇಳು ತ್ತೇನೆ.

ಇನ್ನು ಕೊನೆಯದಾಗಿ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಅದೇನೆಂದರೆ ಈಗ ಬೆಂಗ ಳೂರು ನಗರ ಬಹಳ ದೊಡ್ಡದಾಗಿ ಬೆಳೆಯುತ್ತಾ ಹೋಗುತ್ತಾ ಇರುವುದರಿಂದ ಇನ್ನು ಮುಂದಕ್ಕಾ ದರೂ ಕೂಡ ಗುಡಿಸಲುಗಳು ಬೆಳೆಯದಂತೆ ಮಾಡಬೇಕು. ಅದಕ್ಕೆ ಒಂದು ರಿಸ್ಟ್ರಿಕ್ಷನ್ ತಂದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಇದರಲ್ಲಿ ಅಕ್ಕಪಕ್ಕದ ರಾಜ್ಯದವರು ಅವರು ಇಲ್ಲಿಗೇ ಬಂದು ಅಂದರೆ ಮೈ ಗ್ರೇಷನ್ ಶಾಶ್ವತವಾಗಿ ಆಗಿ ನೆಲೆಸಿ ಬಿಡುವುದರಿಂದ ಇಲ್ಲಿ ಇರತಕ್ಕಂಥಾ ಜನರಿಗೂ ಕೂಡ ತೊಂದರೆಯಾಗಿದೆ ಮತ್ತು ಮುಂದೆ ಬಂದವರ ಈ ಜನರ ಸಮಸ್ಯೆಯೂ ಕೂಡ ಏನೂ ಪರಿಹಾರವಾಗದೇ ಇದ್ದ ಹಾಗೆ ಆಗಿದೆ. ಇದರಿಂದ ಹೊಸ ಹೊಸ ಸಮಸ್ಯೆಗಳು ಉದ್ಭವವಾಗುತ್ತಾ ಇವೆ. ಅವರುಗಳು ಇಲ್ಲಿ ಮೈಗ್ರೇ ಷನ್ ಆಗದೇ ಇದ್ದ ಹಾಗೆ ಮತ್ತು ಮುಂದೆ ಹೊಸ ಹೊಸ ಕೊಳಚೆ ಪ್ರದೇಶಗಳು ಬರದೇ ಇದ್ದಹಾಗೆ ಸೂಕ್ತವಾದ ಒಂದು ಕಾನೂನು ತಂದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ ಇಲ್ಲದೇ ಹೋದರೆ ಏನಾಗುತ್ತದೆ ಎಂದರೆ ಈ ಸ್ಲಂಸ್‌ಗಳು ಪರ್‌ಪ್ಚ್ಯೂಯಲ್ ಆಗಿ ಬಂದುಬಿಡುತ್ತದೆ. ಇದನ್ನು ತಡೆಗಟ್ಟು ವುದು ಒಂದು ಸೂಕ್ತವಾದ ತಿದ್ದುಪಡಿಯನ್ನು ತರಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡು ತ್ತೇನೆ. ಮತ್ತು ನಾನು ಆಗಲೇ ಹೇಳಿದಹಾಗೆ ಇದರಲ್ಲಿ ರಾಜಕಾರಣಿಗಳ ಕೈವಾಡ ಏನು ಇದೆ ಅದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ, ಹೀಗೆ ಮಾಡದೇ ಹೋದರೆ ನಾವು ಏನು ತಿಳಿಯಬೇಕಾಗುತ್ತದೆ ಎಂದರೆ ತಮ್ಮ ಪಕ್ಷದ ಸರ್ಕಾರ ಈಗ ಏನು ಆಡಳಿತ ನಡೆಸುತ್ತಾ ಇದೆಯೋ ಇದರ ಒಂದು ಅಡ್ವಾಂಟೇಜ್ ಅನ್ನು ತಮ್ಮ ಪಕ್ಷದ ಪುಡಾರಿಗಳು ತೆಗೆದುಕೊಂಡು ಈ ರೀತಿ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ತಿಳಿಯಬೇಕಾಗುತ್ತದೆ. ತಮಗೆ ಹೇಳಬೇಕಾದರೆ ರಾಜಾಜಿನಗರದಲ್ಲಿ ಸಾವಿರಾರು ಪಟ್ಟಾಗಳು ಬಂದಿವೆ.

ಅವರನ್ನು ಕೇಳಿದರೆ ಏನು ಹೇಳುತ್ತಾರೆ ಎಂದರೆ ಕಾಂಗ್ರೆಸ್ (ಐ) ನವರೇ ನಮಗೆ ಹೇಳಿದ್ದಾರೆ ಆದುದರಿಂದ ನಾವು ಹಾಕಿದ್ದೇವೆ ಎಂದು ಹೇಳುತ್ತಾರೆ. ಆದುದರಿಂದ ಈ ಬಗ್ಗೆ ಒಂದು ಸ್ಟ್ರಿಕ್ಟ್ ಆಗಿ ಒಂದು ಕಾನೂನು ತೆಗೆದುಕೊಂಡು ಬಂದರೆ ಆನಂತರ ಹೆಚ್ಚು ಸ್ಲಂಸ್‌ಗಳು ಬರದೇ ಇದ್ದ ಹಾಗೂ ಆಗುತ್ತದೆ ಜೊತೆಗೆ ಈ ಬಗ್ಗೆ ಒಂದು ಪರಿಹಾರವನ್ನೂ ಕೂಡ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಮುಂದೆ ಮುಂದೆ ಇದು ಬೆಳೆಯದೇ ಇರುವ ಹಾಗೆ, ಇದನ್ನು ತಡೆಗಟ್ಟುವ ಹಾಗೆ ಮಾಡುವುದಕ್ಕೂ ಕೂಡ ಸಾಧ್ಯವಾಗುತ್ತದೆ. ತಾವು ಈ ಬಗ್ಗೆ ಸರಿಯಾದ ಒಂದು ಕ್ರಮವನ್ನು ತೆಗೆದುಕೊಳ್ಳದೇ ಇದನ್ನು ಒಂದು ಹದಬಿಸ್ತಿಗೆ ತರದೇ ಹೋದರೆ ನಾವು ಅವರ ಮನಸ್ಸಿನಲ್ಲಿ ಏನು ಇದೆ ಎಂದು ತಿಳಿಯಬೇಕಾಗುತ್ತದೆ ಎಂದರೆ ಸರ್ಕಾರವೇ ಇವರಿಗೆ ಒಂದು ರಕ್ಷಾ ಕವಚವನ್ನು ಹಾಕಿಕೊಟ್ಟಿದೆಯೋ ಏನೋ ಅಂತ ತಿಳಿಯಬೇಕಾಗುತ್ತದೆ. ಆದುದರಿಂದ ನಾನು ತಮ್ಮ ಮೂಲಕ ಅವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಏನೆಂದರೆ ತಮ್ಮ ಒಂದು ಸರ್ಕಾರ ಇದಕ್ಕೆ ಪ್ರೇರಣೆ ಕೊಡುವಂಥಾದ್ದಾಗಲಿ ಅಥವಾ ಪ್ರೋತ್ಸಾಹ ಕೊಡುವಂಥಾದ್ದಾಗಲಿ ಇದ್ದರೆ ಅದನ್ನು ನಿಲ್ಲಿಸಬೇಕು ಈ ಒಂದು ಗಡುವನ್ನು ತಾವು ಈ ಸಂದರ್ಭದಲ್ಲಿ ತಾಳಬೇಕು ಎಂದು ಹೇಳುತ್ತೇನೆ. ಮತ್ತು ಕೊನೆಯದಾಗಿ ಈ ಸ್ಲಂಸ್‌ಗಳವರಿಗೆ ಕನಿಷ್ಟಪ್ರಮಾಣದ ಒಂದು ಸೌಲಭ್ಯವನ್ನಾದರೂ ಕೊಡಬೇಕೆಂದು ನಾನು ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ.

† ಶ್ರೀ ವೈ. ರಾಮಕೃಷ್ಣ (ಆನೇಕಲ್) :—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸ್ಲಂಸ್ ಡ್ವೆಲರ್ಸ್ ಅಂತ ಇದ್ದರೂ ಕೂಡ ಈ ಕೊಳಚೆ ಪ್ರದೇಶದಲ್ಲಿ ವಾಸ ಮಾಡತಕ್ಕಂಥಾ ಜನರ ಆರ್ಥಿಕ, ಸಾಮಾಜಿಕ ಮತ್ತು ಸರ್ವತೋಮುಖವಾದ ಪ್ರಗತಿಗೆ ಸಂಬಂಧಪಟ್ಟ ಹಾಗೆ ಇರುವುದರಿಂದ ಈ ಬಗ್ಗೆ ಯಾವ ರಾಜಕೀಯ ಪಕ್ಷ ಭೇದಭಾವವನ್ನು ತೋರಿಸದೇ ಅವರ ಒಂದು ಪ್ರಗತಿಗೆ ಏನು ಮಾಡಬೇಕು ಅನ್ನುವುದರ ಕಡೆಗೆ ನನ್ನ ಮಾತನ್ನು ಉಪಯೋಗಿಸಿಕೊಳ್ಳುತ್ತೇನೆ. ಈ ಬಗ್ಗೆ ನಾನಂ ಏನು ಆಪವಾದ ಮಾಡುತ್ತೇನೆಂದರೆ ಅವರನ್ನು ಯಾವ ಒಂದು ದೃಷ್ಟಿಕೋಣದಿಂದ ನೋಡಬೇಕೋ ಆ ರೀತಿಯಾಗಿ ನಿಜವಾಗಿಯೂ ನೋಡುತ್ತಾ ಇಲ್ಲ ಎಂದು ನಾನು ಒತ್ತಿ ಹೇಳುತ್ತೇನೆ.

ನನಗೆ ತುಂಬ ವ್ಯಥೆಯಾಗುತ್ತದೆ. ಇದನ್ನು ಸರ್ಕಾರದವರು ಮಾನವೀಯತೆಯ ದೃಷ್ಟಿಯಿಂದ ನೋಡುತ್ತಿಲ್ಲ, ರಾಜಕೀಯ ದೃಷ್ಟಿಯಿಂದ ನೋಡುತ್ತಿದ್ದಾರೆ. ಯಾವ ಸಂದರ್ಭದಲ್ಲಿ ಇವರನ್ನು ರಾಜಕೀಯವಾಗಿ ಬಳಸಿಕೊಳ್ಳಬೇಕೋ ಆ ಸಂದರ್ಭದಲ್ಲಿ ಬಳಸಿಕೊಂಡು ಉಳಿದ ಸಂದರ್ಭದಲ್ಲಿ ಅವರ ಯೋಗಕ್ಷೇಮವನ್ನು ನಮ್ಮ ಪಾರ್ಟಿಯವರು ನೋಡಿಕೊಳ್ಳಲಿಕ್ಕೆ ಬೇಕು ಎನ್ನುವ ಮನೋಭಾವವನ್ನು ಹೊಂದಿದ್ದಾರೆಂದು ಕಾಣುತ್ತದೆ. ಇದಕ್ಕೆ ನಾನು ಒಂದು ನಿದರ್ಶನವನ್ನು ಕೊಡುತ್ತೇನೆ. ಕಳೆದ ಆರು ತಿಂಗಳಿಂದ ಅಥವಾ ಒಂದು ವರ್ಷದಿಂದ ಅಧಿಕಾರ ತಮ್ಮ ಕೈಯಲ್ಲಿ ಬಂದಿದೆ. ತಾವು ತಮ್ಮ ಅಧಿಕಾರಿಗಳನ್ನು ಕರೆಯಿಸಿ, ಬೆಂಗಳೂರಿನಲ್ಲಿ ಕಳೆದ ಆರು ತಿಂಗಳಿಂದ ಎಷ್ಟು ಹೊಸ ಸ್ಲಂಗಳು ಬಂದಿವೆ, ಇದಕ್ಕೆ ಯಾರು ಕಾರಣರು, ಹೇಗೆ ಅಧಿಕಾರಿಗಳು ಅಲೋ ಮಾಡಿದರು ಎನ್ನುವುದನ್ನು ಕೇಳುತ್ತೀರಾ ? ಅದೆಲ್ಲಾ ಆಗುತ್ತಿದ್ದಾಗ ನಾವು ಸರ್ಕಾರ ಕೆಲಸ ಮಾಡುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇನ್ನೂ ಮೂರು ನಾಲ್ಕು ತಿಂಗಳಲ್ಲಿ ಕಾರ್ಪೊರೇಷನ್‌ಗೆ ಚುನಾವಣೆಯಂ ಆಗಬೇಕಾಗಿದೆ, ಹೊಸದಾಗಿ ಕಾರ್ಪೊರೇಷನ್‌ಗೆ ನೂರಾರು ಹಳ್ಳಿಗಳನ್ನು ಸೇರಿಸಿದ್ದಾರೆ. ಏಕೆಂದರೆ, ಕಳೆದ ಚುನಾವಣೆಯಲ್ಲಿ ಜನರು ನಿಮಗೆ ಮತ ಕೊಟ್ಟಿಲ್ಲವೆಂದು ತಿಳಿದು ಎಲ್ಲಿ ಹೇಗೆ ಬೇಕೋ ಹಾಗೆ, ಎಲ್ಲಿ ಆಗತ್ಯ ಇದೆ ಅಲ್ಲಲ್ಲಿ ತಾವು ಸ್ಲಂಗಳನ್ನು ಕಟ್ಟುವುದಕ್ಕೆ ಬಿಟ್ಟಿದ್ದೀರಿ. ನಾನು ನನ್ನ ಹೇಳಿಕೆಯನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಉದಾಹರಣೆಗೆ ಮೈಸೂರು ರೋಡಿನಲ್ಲಿರುವ ಸ್ಲಂ— ಒಂದು ವರ್ಷದಲ್ಲಿ ಎಷ್ಟು ಗುಡಿಸಲುಗಳನ್ನು ಕಟ್ಟಲಿಕ್ಕೆ ಸಾಧ್ಯ ಎನ್ನುವುದನ್ನು ನಾವು ಯೋಚನೆಮಾಡಬೇಕು. ಒಂದೇ ಒಂದು ತಿಂಗಳಲ್ಲಿ ೫ರಿಂದ ೬ ಸಾವಿರ ಗುಡಿಸಲುಗಳನ್ನು ಕಟ್ಟುವುದಕ್ಕೆ ಹೇಗೆ ಸಾಧ್ಯ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ನಿಜವಾಗಿಯೂ ಸರ್ಕಾರ ಕೆಲಸ ಮಾಡುತ್ತಿದೆಯೇ ಮಾಡುತ್ತಿದ್ದರೆ ಈ ರೀತಿಯ ಸ್ಲಂ ಬೆಳವಣಿಗೆಯ ಬಗ್ಗೆ ಸರ್ಕಾರದವರು ಏನಂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಹೇಳುತ್ತಾರೆಯೇ? ತಮ್ಮ ಪಾರ್ಟಿಯ ಕೆಲವು ಸದಸ್ಯರುಗಳು ಇದಕ್ಕೆ ಕುಮ್ಮಕ್ಕಿ ಕೊಟ್ಟು ಸ್ಲಂಗಳನ್ನು ಕಟ್ಟಿಸುತ್ತಿದ್ದಾರೆ. ಒಂದು ಕೈಯಲ್ಲಿ ನೀವೇ ಸ್ಲಂಗಳನ್ನು ಕಟ್ಟಿಸಂವುದು ಇನ್ನೊಂದು ಕೈಯಲ್ಲಿ ಇವುಗಳನ್ನು ಕ್ಲಿಯರ್ ಮಾಡುವುದಕ್ಕೆ ಬೋರ್ಡನ್ನು ಮಾಡುವಂಥ ದ್ವಂದ್ವ ನೀತಿ ಏಕೆ ? ತಜ್ಞರು ಸೋಷಿಯೋ ಎಕನಾಮಿಕ್ ಸರ್ವೆ ಮಾಡಿರುವ ಪ್ರಕಾರ ನಗರದಲ್ಲಿ ನಡೆದಿರತಕ್ಕ ಕ್ರೈಮ್ಸ್‌ಗಳಿಗೆ, ಶೇಕಡ ೩೮ ಕ್ರೈಂಗಳಲ್ಲಿ ಈ ಸ್ಲಂಗಳಲ್ಲಿ ವಾಸ ಮಾಡತಕ್ಕವರಿಂದ ನಡೆದಿದೆಯೆಂದು ಹೇಳಿದ್ದಾರೆ. ಇದರ ಜೊತೆಗೆ ಖಾಹಿಲೆ ರಹಿತವಾದಂಥ

ನಗರಕ್ಕೆ ಅದರ ಅಂದವನ್ನು ಕೆಡಿಸುವುದಕ್ಕೆ ಏನೇನೋ ಬೇಕೋ ಅದನ್ನೆಲ್ಲಾ ಈ ಸರ್ಕಾರದವರು ಮಾಡಿದ್ದಾರೆ. ನಮ್ಮ ಬೆಂಗಳೂರು ನಗರಕ್ಕೆ ಪುತ್ತೆ ಕಾಲರ ಬಂದಿದೆ. ಇನ್ನೂ ದೊಡ್ಡ ದೊಡ್ಡ ಖಾಯಿಲೆಗಳನ್ನು ಬೆಂಗಳೂರು ನಗರಕ್ಕೆ ಬರುವಂತೆಮಾಡುವುದಕ್ಕೆ ಈ ಸರ್ಕಾರ ಮನಸ್ಸು ಮಾಡಿದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಈ ಸ್ಲಂಗಳಲ್ಲಿ ವಾಸ ಮಾಡತಕ್ಕ ಜನರಿಗೆ ಸೌಲಭ್ಯಗಳನ್ನು ಕೊಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಈ ವಿಷಯದಲ್ಲಿ ನಮ್ಮ ಪಕ್ಷ ಮೊದಲನೆಯದು. ಈ ಜನರಿಗೆ ಅನುಕೂಲ ಕಲ್ಪಿಸಬೇಕೆಂದು ನಮ್ಮ ಸರ್ಕಾರದವರು ದೃಢ ಸಂಕಲ್ಪ ಮಾಡಿದ್ದಾರೆ. ನಾವೂ ಸಹ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಈ ಸ್ಲಂ ಕ್ಲಿಯರೆನ್ಸ್‌ಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕೆಂದು ಡಿಮ್ಯಾಂಡ್ ಮಾಡುತ್ತಿದ್ದೇವೆ. ಲೋಕಸಭೆಯ ಅಧ್ಯಕ್ಷರಾದ ಮಾನ್ಯ ಪೆಗ್ಗಡೆಯವರು ನಮ್ಮ ನಗರದಿಂದ ಎಲೆಕ್ಟ್ ಆಗಿ ಹೋಗಿದ್ದಾರೆ, ಅವರ ಒತ್ತಾಯದ ಮೇಲೆ ನಗರದಲ್ಲಿರತಕ್ಕ ಸ್ಲಂ ಕ್ಲಿಯರ್ ಮಾಡುವುದಕ್ಕೆ ಕೆಲವಾರು ಕೋಟಿ ರೂಪಾಯಿಗಳನ್ನು ಪಡೆಯತಕ್ಕ ಸಂದರ್ಭ ಇದೆ. ಸರ್ಕಾರದ ಯಂತ್ರವನ್ನು ಪಳಿಸಿಕೊಂಡಿರತಕ್ಕ ಜನರು ಸ್ಲಂಗಳನ್ನು ರಾಜಕೀಯಕ್ಕೋಸ್ಕರ ಬೆಳೆಯುವುದಕ್ಕೆ ಬಿಟ್ಟರೆ ನಗರದ ಪರಿಸ್ಥಿತಿ ಏನಾಗುತ್ತದೆನ್ನುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇದನ್ನು ನಾವುಗಳು ಪ್ರಕೃತೀತವಾಗಿ ಯೋಚನೆ ಮಾಡಬೇಕು ಈ ಸರ್ಕಾರದವರು ಸ್ಲಂ ಕ್ಲಿಯರೆನ್ಸ್‌ಬೋರ್ಡ್ ಎಂದು ಮಾಡಿದ್ದಾರೆ. ಎಂಥವರ ಕೈಯಲ್ಲಿ ಈ ಬೋರ್ಡನ್ನು ಕೊಟ್ಟಿದ್ದಾರೆ ? ಇದಕ್ಕೆ ಎಷ್ಟು ಹಣ ಕೊಟ್ಟಿದ್ದಾರೆ, ಎಷ್ಟು ಅಧಿಕಾರವನ್ನು ಇವರಿಗೆ ಕೊಟ್ಟಿದ್ದಾರೆ, ಈ ಬೋರ್ಡಿನ ಮುಖಾಂತರ ಸ್ಲಂಗಳನ್ನು ಕ್ಲಿಯರ್ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಆಲೋಚನೆ ಮಾಡಬೇಕು. ಸರ್ಕಾರದವರು ಸ್ಲಂಗಳನ್ನು ಕ್ಲಿಯರ್ ಮಾಡಬೇಕು ಎಂದು ನಮ್ಮ ಆಸೆ, ಸ್ಲಂಗಳನ್ನು ಕನ್‌ಸ್ಟ್ರಕ್ಟ್ ಮಾಡಬೇಕೆಂದಲ್ಲ ಸ್ಲಂಗಳನ್ನು ಸರ್ಕಾರದವರು ಕ್ಲಿಯರ್ ಮಾಡದೇ, ಕ್ರಿಯೇಟ್ ಮಾಡುತ್ತಿದ್ದಾರೆ, ಕ್ರಿಯೇಟ್ ಮಾಡುವುದಕ್ಕೆ ಕ್ಲಿಯರೆನ್ಸ್ ಕೊಡುತ್ತಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ, ರಾತ್ರೋರಾತ್ರಿ ನೂರಾರು ಗುಡಿಸಲುಗಳನ್ನು ಕಟ್ಟಿ ಪ್ರಭಾಕರ ನಗರ, ರಂಗನಾಥ ನಗರ, ದೇವರಾಜ ಅರಸ್ ನಗರ ಎಂದು ಹೆಸರು ಇಟ್ಟುಬಿಡುವಂಥ ಪ್ರಸಂಗಗಳು ಅನೇಕ ನಡೆದಿವೆ. ಉದಾಹರಣೆಗೆ ಹೇಳುವುದಾದರೆ, ಪ್ಯಾಲೇಸ್ ಗುಟ್ಟಹಳ್ಳಿಯಲ್ಲಿರತಕ್ಕ ಸ್ಲಂಗಳನ್ನು ಕಟ್ಟಿಸಿದ್ದುದು ಇವರೇ. ಅಲ್ಲಿಯ ಜನರೇ ಈ ಮಾತನ್ನು ಹೇಳುತ್ತಾರೆ. ಚುನಾವಣೆಗಳು ಬಂದಾಗ ಮಾನ್ಯ ಪ್ರಭಾಕರ್ ಅವರು ಮೊದಲು ಹೋಗುವುದು ಅಲ್ಲಿಗೆ. ಆದರೆ ಆಮೇಲೆ ಹೋಗುವುದಿಲ್ಲ, ಅಲ್ಲಿಯ ಜನರು ನೀರು ಬೇಕಾದರೆ ಮಾನ್ಯ ರಾಮದೇವ್ ಅವರನ್ನು ಹಿಡಿದುಕೊಳ್ಳುತ್ತಾರೆ. ಲೈಟು ಬೇಕಾದರೆ ಆನಂದರಾವ್ ಅವರನ್ನು ಹಿಡಿದುಕೊಳ್ಳುತ್ತಾರೆ, ಪ್ರಭಾಕರ್ ಅವರ ಹತ್ತಿರ ಯಾರೂ ಹೋಗುವುದಿಲ್ಲ. ಏಕೆಂದರೆ, ಇವರ ಹತ್ತಿರ ಗನ್-ಮ್ಯಾನ್ ಇರುತ್ತಾನೆ. ಈ ಜನರ ವಿಚಾರದಲ್ಲಿ ನನಗೆ ಬಹಳ ಅನುಕಂಪ ಇದೆ. ಆದರೆ ರಾಜಕೀಯದಿಂದ ಸ್ಲಂಗಳನ್ನು ಮಾತ್ರ ಕಟ್ಟುವುದಕ್ಕೆ ಖಂಡೀತವಾಗಿಯೂ ಕೈ ಹಾಕುವುದು ಬೇಡ.

ಎರಡನೆಯದಾಗಿ, ಅತಿ ಮುಖ್ಯವಾದುದು, ಯಾವ ರೀತಿಯಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವುದು. ಕಳೆದ ಸಾರಿ ನಾನು ಈ ವಿಷಯನ್ನು ಚರ್ಚೆ ಮಾಡುತ್ತಿದ್ದಾಗ ಒಂದು ಪಾಯಿಂಟ್‌ನ್ನು ತಮ್ಮ ಗಮನಕ್ಕೆ ತಂದೆ. ಯಾರು ಸ್ಲಂ ಡ್ವೆಲ್ಲರ್ಸ್ ಇದ್ದಾರೋ ಅವರಿಗೆ ಒಂದು ರಿಜಿಸ್ಟ್ರೇಷನ್ ಮಾಡಿ ಎಂದು ಹೇಳಿದ್ದೆ. ಯಾರು ನಿಜವಾಗಿಯೂ ಸ್ಲಂ ಡ್ವೆಲ್ಲರ್ಸ್, ಅವರ ಆದಾಯ ಏನು, ಅವರ ಕಸುಬು ಏನು, ಆದಾಯ ಕಸುಬುಗಳನ್ನು ಇವುಗಳನ್ನು ಅವಲಂಬಿಸಿ ಅವರಿಗೆ ಅನುಕೂಲತೆಗಳನ್ನು ಕೊಡಬೇಕು. ಈ ಅನುಕೂಲತೆಗಳನ್ನು ಕೂಡುವಾಗ, ಸ್ಲಂಕ್ಲಿಯರನ್ಸ್ ಬೋರ್ಡ್, ಕಾರ್ಪೊರೇಷನ್ ಮತ್ತು ಬಿ.ಡಿ.ಎ. ಅವರು ಕೋ-ಆರ್ಡಿನೇಷನ್‌ನಿಂದ ಕೆಲಸ ಮಾಡಬೇಕು. ಈ ಮೂರು ಸ್ವಾಯತ್ತ ಸಂಸ್ಥೆಗಳು ಸೇರಿ ಕೆಲಸ ಮಾಡಿದರೆ ಈ ಸಮಸ್ಯೆಯನ್ನು ನೀಗುವುದಕ್ಕೆ ಅಸಾಧ್ಯವೇನಲ್ಲ. ಆದರೆ ಇವರು ಈ ಕೆಲಸ ಮಾಡುವುದಕ್ಕೆ ತಯಾರಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಸ್ಲಂಕ್ಲಿಯರೆನ್ಸ್ ಹೇಗೆ ಆಗುತ್ತಿದೆ ಎನ್ನುವುದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಒಂದು ಪುರಸಭೆಯಲ್ಲಿ ಒಬ್ಬ ಅಧ್ಯಕ್ಷರು ಇದ್ದರು. ಇವರು ಡಾಕ್ಟರೂ ಹೌದು. ಆ ಊರಲ್ಲಿ ಬೇರೆ ಯಾರೂ ಡಾಕ್ಟರೂ ಇಲ್ಲ. ಅಧ್ಯಕ್ಷರು ಏನು ಮಾಡುವುದು ಎಂದರೆ, ಆ ಊರಿನ ನೀರಿನ ಟ್ಯಾಂಕಿಗೆ ಯಾವುದೋ ಒಂದು ಮೆಡಿಸಿನ್ ಹಾಕಿಬಿಟ್ಟು ಜನರಿಗೆ ಹೊಟ್ಟೆ ನೋವು ಬರುವಂತೆ ಮಾಡುವುದು. ಹೊಟ್ಟೆ ನೋವು ಬಂದಂಥ ಜನ ಈ ಡಾಕ್ಟರ್ ಹತ್ತಿರ ಹೋಗಬೇಕೇ ಹೊರತು ಬೇರೆಯವರ ಹತ್ತಿರ ಹೋಗುವಂತಿಲ್ಲ. ಡಾಕ್ಟರ ಖಜಾನೆ ತುಂಬಿದ ನಂತರ ಟ್ಯಾಂಕಿಗೆ ಒಳ್ಳೆಯ ಔಷಧಿ

ಯನ್ನು ಹಾಕಿಸಿ ಜನರನ್ನು ರೋಗದಿಂದ ದೂರ ಮಾಡುತ್ತಿದ್ದರು. ಹೀಗೆಯೇ ಅವನು ಪ್ರತಿ ಆರು ತಿಂಗಳಿಗೊಂದು ಸಾರಿ ಕಡ್ಡಾಯವಾಗಿ ಜನರಿಗೆ ರೋಗ ಬರಬೇಕು, ಈ ಅಧ್ಯಕ್ಷರಿಗೆ ದುಡ್ಡು ಬರಬೇಕು. ಹೀಗೆದೆ ನಮ್ಮ ಕರ್ನಾಟಕ ಸರ್ಕಾರದವರು ಮಾಡುತ್ತಿರುವ ಕೆಲಸ.

ಶ್ರೀ ವೈ. ರಾಮಕೃಷ್ಣ.—ಈ ರಿಜಿಸ್ಟ್ರೇಷನ್ ಸಿಸ್ಟಂನ್ನು ಜಾರಿಗೆ ತಂದು ಈ ಮೂರು ಆಟೊ ನಮಸ್ ಬಾಡಿಗಳು ಕೋ_ಆರ್ಡಿನೇಷನ್ ಇಟ್ಟುಕೊಂಡು ಕೆಲಸ ಮಾಡಿದರೆ, ಕೊಳಚೆ ನಿರ್ಮೂಲನದ ಕೆಲಸ ಸರಿಯಾಗಿ ಆಗುತ್ತದೆ. ಬೆಂಗಳೂರು ಏರ್‌ಕ್ರಾಫ್ಟ್‌ನ ಹತ್ತಿರ ''ಹನುಮಾನ್ ನಗರ,' ಎಂದು ಒಂದು ಸ್ಲಂ ಇದೆ. ಅಲ್ಲಿ ಎಷ್ಟು ಸಂಬಳ ಬರತಕ್ಕವರು ಸೈಟನ್ನು ಹೊಂದಿದ್ದಾರೆ, ಎಂದರೆ, ಸುಮಾರು ೧೦೦೦ ರೂಪಾಯಿಗಳ ಸಂಬಳ ಬರುತ್ತಿರುವವರು ಸ್ಲಂನಲ್ಲಿ ಜಾಗವನ್ನು ಹೊಂದಿದ್ದಾರೆ, ೯೦೦ ರೂಪಾಯಿಗಳ ಸಂಬಳ ಬರುತ್ತಿರುವವರು ಜಾಗವನ್ನು ಹೊಂದಿದ್ದಾರೆ. ಅದೇ ರೀತಿ ೮೦೦, ೭೦೦, ೬೦೦ ರೂಪಾಯಿಗಳವರೆಗೆ ಸಂಬಳ ಬರುವವರೂ ಸಹ ಈ ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೆ ಸರ್ಕಾರದ ನೌಕರಿಯಲ್ಲಿರುವವರೂ ಸಹ ಈ ಗುಡಿಸಲು ವಾಸಿಗಳ ಜೊತೆಯಲ್ಲಿಯೇ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇಂತಹವರು ಬಡವರಿಂದ ಕಡಿಮೆ ಬೆಲೆಗೆ ಗುಡಿಸಲುಗಳನ್ನು ಕೊಂಡುಕೊಂಡು ಬೇರೆಯವರಿಗೆ ಲಾಭಕ್ಕೆ ಮಾರಿ ಸಾವಿರಾರು ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ಇಂತಹ ಇಪ್ಪತ್ತು ಪ್ರಸಂಗಗಳು ಒಂದೇ ಕೊಳಚೆ ಪ್ರದೇಶದಲ್ಲಿ ನಡೆದಿದೆ. ವಾರ್ಷಿಕ ೩೬ ಸಾವಿರ ರೂಪಾಯಿಗಳಷ್ಟು ವರಮಾನವಿರುವವರೂ ಸ್ಲಂಗಳಲ್ಲಿ ಇದ್ದಾರೆ. ಇಂತಹವರು ಅಲ್ಲಿ ವಾಸ ಮಾಡುವುದನ್ನು ತಪ್ಪಿಸಬೇಕು. ಇತಹವರನ್ನು ಗುರುತಿಸಿ ಅವರನ್ನು ಶಿಕ್ಷೆಗೆ ಗುರಿಪಡಿಸಿ. ಏಕೆಂದರೆ, ಬಿಟ್ಟಿ ಲೈಟ್ ಮತ್ತು ನೀರು ಸಿಗುತ್ತದೆಂದು ಗುಡಿಸಲುಗಳಲ್ಲಿ ಇವರು ವಾಸ ಮಾಡುತ್ತಾರೆ. ಇಂತಹವರು ಅಲ್ಲಿದ್ದರೆ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಲು ಎಲ್ಲಿ ಸಾಧ್ಯವಾಗುತ್ತದೆ ? ಬಡವರ ಬಗ್ಗೆ ನನಗೆ ಅನುಕಂಪವಿದೆ. ಅವರಿಗೆ ಅನುಕೂಲ ಮಾಡಿಕೊಡಬಾರದೆಂದು ನಾನು ಹೇಳುವುದಿಲ್ಲ. ಆದರೆ ಅವರ ವಾರ್ಷಿಕ ಆದಾಯ ಎಷ್ಟಿರಬೇಕೆಂಬುದನ್ನು ಮೊದಲು ನಿರ್ಧರಿಸಿ ಮಾಡಿ. ಈಗ ವಾರ್ಷಿಕವಾಗಿ ೩೬೦೦ ರೂಪಾಯಿಗಳವರೆಗೆ ವರಮಾನವಿರುವವರ ಮಕ್ಕಳಿಗೆ ಫೀಮನ್ನಾ ಮಾಡಿರುವಂತೆ ಇಷ್ಟು ವಾರ್ಷಿಕ ವರಮಾನವಿರುವವರು ಮಾತ್ರ ಗುಡಿಸಲುಗಳಲ್ಲಿ ವಾಸ ಮಾಡಬೇಕೆಂದು ಒಂದು ನಿಯಮ ಮಾಡಿ. ಅದಕ್ಕೆ ಮೇಲ್ಪಟ್ಟವರು ಅಲ್ಲಿ ವಾಸ ಮಾಡಲು ಅವಕಾಶ ಕೊಡಬಾರದು. ಈ ಮೊದಲು ೧೪೦ ಕೊಳಚೆ ಪ್ರದೇಶಗಳಿದ್ದವು ಕಳೆದ ಆರು ವರ್ಷಗಳಿಂದೀಚೆಗೆ ಇವುಗಳ ಸಂಖ್ಯೆಯನ್ನು ನೀವೇ ಬೆಳೆಸಿದ್ದೀರಿ. ರಾಜಕೀಯದ ಅವಶ್ಯಕತೆಯನ್ನು ಕಂಡು ಕೊಂಡ ಈ ಜನರನ್ನು ಪೋಷಣೆ ಮಾಡಿಕೊಂಡು ಬಂದಿದ್ದೀರಿ. ಆದರೆ ಅವರ ಜೀವನ ಮಟ್ಟ ಯಾವ ರೀತಿ ಇದೆಯೆಂಬುದನ್ನು ತಾವು ನೋಡಬೇಕು.

ಶ್ರೀ ಮಳ್ಳೂರು ಆನಂದರಾವ್.—ಇವರು ಅಧಿಕಾರ ವಹಿಸಿಕೊಂಡಾಗ ಬೆಂಗಳೂರಿನಲ್ಲಿ ೧೬೨ ಕೊಳಚೆ ಪ್ರದೇಶಗಳಿದ್ದವು. ಆದರೆ ಇಂದು ಅವುಗಳ ಸಂಖ್ಯೆ ೪೦೦ಕ್ಕೂ ಮೀರಿದೆ. ಈ ಒಂದು ಕೀರ್ತಿ ಇವರಿಗೆ ಸಲ್ಲುತ್ತದೆ. ಮತ್ತು ಈ ವಿಚಾರದಲ್ಲಿ ಇವರು ಪ್ರಗತಿ ಸಾಧಿಸಿದ್ದಾರೆಂದು ಹೇಳಬಹುದು.

ಶ್ರೀ ವೈ. ರಾಮಕೃಷ್ಣ —ತಮ್ಮ ಪಕ್ಷದಲ್ಲಿಯೇ ಇರುವಂತಹ ಶ್ರೀ ಬಸವಣ್ಣನವರನ್ನು ಸ್ಲಂ ಕ್ಲಿಯರೆನ್ಸ್ ಬೋರ್ಡಿನ ಚೇರ್‌ಮನ್ ಆಗಿ ನೇಮಕ ಮಾಡಿದಿರಿ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಅವರು ಮಂತ್ರಿಗಳಾಗಿ ಕೆಲಸ ಮಾಡಿ ಸ್ವಲ್ಪ ಅನುಭವ ಪಡೆದಿದ್ದರು. ಅವರು ಇದೇ ಕಮ್ಯುನಿಟಿಗೆ ಸೇರಿದ ಜನರಾದ ಕಾರಣ ಈ ಜನರ ಬಗ್ಗೆ ಒಳ್ಳೆಯ ಅನುಕಂಪ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು. ಅವರ ಅಭಿವೃದ್ಧಿಯ ಸಲುವಾಗಿ ಮಾಸ್ಟರ್ ಪ್ಲಾನನ್ನು ತಯಾರು ಮಾಡಿದರು. ಅದು ಸರ್ಕಾರದ ಮುಂದಿರಬಹುದೆಂದು ಕಾಣುತ್ತದೆ. ಆ ಮಾಸ್ಟರ್ ಪ್ಲಾನನ್ನು ಅವರು ಕೇಂದ್ರ ಸರ್ಕಾರಕ್ಕೂ ಕಳುಹಿಸಿರಬಹುದು. ಇಂದು ಆ ಮಾಸ್ಟರ್ ಪ್ಲಾನಿನ ಗತಿ ಏನಾಯಿತು ? ಅವರು ಸಂಗಳ ಕ್ರಿಯರೆನ್ಸ್ ಬಗ್ಗೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು, ಅದರಂತೆ ಜಾರಿಗೆ ತರಬೇಕೆದಿದ್ದಾಗ ಸರ್ಕಾರದವರು ಅವರನ್ನು ಆ ಹುದ್ದೆಯಿಂದ ತೆಗೆದು ಬೇರೆಯವರನ್ನು ಆ ಜಾಗಕ್ಕೆ ಹಾಕಿದರು. ಈ ರೀತಿ ಮಾಡಿದರೆ ಸ್ಲಂಗಳ ಕ್ಲಿಯರೆನ್ಸ್ ಹೇಗೆ ಆಗುತ್ತದೆ ? ರಜಾದಿನಗಳನ್ನು ಬಿಟ್ಟು ಬೇರೆ ದಿನಗಳಲ್ಲಿ ದಿನಕ್ಕೆ ಒಂದರಂತೆ ಕೊಳಚೆ ಪ್ರದೇಶಗಳಿಗೆ ಭೇಟಿ ಕೊಟ್ಟು, ಅವುಗಳ ಅಭಿವೃದ್ಧಿಯ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಲು ಒಂದು ವರ್ಷ ಬೇಕಾಗುತ್ತದೆ. ಅವರ ಪ್ರಕಾರ ಅವರು ಕೆಲಸ ಮಾಡುತ್ತಿದ್ದಾಗ ಒಂದು ವರ್ಷದಲ್ಲಿಯೇ ಅವರನ್ನು ಆ ಜಾಗದಿಂದ ತೆಗೆದು ಬೇರೆಯವರನ್ನು ಅಲ್ಲಿ ಕೂರಿಸಿದರೆ ಅಭಿವೃದ್ಧಿಯ

ಕೆಲಸಗಳು ಯಾವ ರೀತಿ ಆಗುತ್ತದೆ. ಈ ರೀತಿಯ ಆಡಳಿತವನ್ನು ತಾವು ಮಾಡಬೇಡಿ. ಅವರೂ ಮನುಷ್ಯರು ; ನಿಮನ್ನು ಆ ಜಾಗದಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿರುವವರೇ ಅವರು ; ಆದರೆ ಅವರನ್ನೇ ನೀವು ಮರೆತರೆ ಬೇರೆಯವರು ಎಲ್ಲಿ ನಿಮ್ಮ ಜ್ಞಾಪಕದಲ್ಲಿರುತ್ತಾರೆ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ನಾವು ಅವರನ್ನು ಮರೆಯುವುದಿಲ್ಲ ?

ಶ್ರೀ ವೈ. ರಾಮಕೃಷ್ಣ.—ನೀವು ಅವರನ್ನು ಮರೆತಿರುವುದರಿಂದಲೇ ಮಾನ್ಯ ಸದಸ್ಯರು ಈ ನಿರ್ಣಯವನ್ನು ತಂದಿರುವುದು. ಹಂದಿ ನಾಯಿಗಳೂ ಸಹ ವಾಸ ಮಾಡುವುದಕ್ಕೆ ಸಾಧ್ಯವಿಲ್ಲ, ಅಂತಹ ಜಾಗದಲ್ಲಿ ಈ ಜನರು ವಾಸ ಮಾಡುತ್ತಿದ್ದಾರೆ. ಬೇಕಾದರೆ ತಾವು ಟ್ಯಾನರಿ ರೋಡಿನಲ್ಲಿರುವ ಕೊಳಚೆ ಪ್ರದೇಶಕ್ಕೆ ಹೋಗಿ ನೋಡಿ. ಅಲ್ಲಿಗೆ ಹೋದರೆ ಮೂಗು ಒಂದೇ ಅಲ್ಲ, ಪಂಚೇಂದ್ರಿಯಗಳನ್ನೂ ಮುಚ್ಚಿಕೊಂಡು ಮುಂದಕ್ಕೆ ಹೋಗಬೇಕಾಗುತ್ತದೆ. ತಾವು ಓಟನ್ನು ಕೇಳುವ ಸಮಯದಲ್ಲಿ ಮಾತ್ರ ಆ ಜಾಗಗಳಿಗೆ ಹೋಗಿ ನೋಡಿರಬಹುದು ; ನಂತರ ತಾವು ಆ ಕಡೆಗೆ ಹೋಗುವುದಿಲ್ಲ. ಈ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಜನರ ಆರ್ಥಿಕ ಪ್ರಗತಿಯ ಬಗ್ಗೆ ಸಮಾಜಿಕ ಪ್ರಗತಿಯ ಬಗ್ಗೆ, ನೈರ್ಮಲ್ಯದ ಪ್ರಗತಿಯ ಬಗ್ಗೆ, ವಿದ್ಯಾಭ್ಯಾಸದ ಪ್ರಗತಿಯ ಬಗ್ಗೆ, ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡುವುದರ ಬಗ್ಗೆ ನಾನು ಮಾನವೀಯತೆಯ ದೃಷ್ಟಿಯಿಂದ ಒಂದು ಸಲಹೆ ಕೊಡತ್ತೇನೆ. ಏನೆಂದರೆ, ಈಗಿನ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಗಳಿಂದ ಹಿಡಿದು ರಾಜ್ಯಮಂತ್ರಿಗಳವರೆಗೆ ಒಟ್ಟು ೨೩ ಅಥವಾ ೨೪ ಜನ ಮಂತ್ರಿಗಳಿರಬಹುದು. ಇಷ್ಟು ಜನ ಮಂತ್ರಿಗಳೂ ಬೆಂಗಳೂರಿನಲ್ಲಿಯೇ ವಾಸ ಮಾಡುವುದರಿಂದ ಬೆಂಗಳೂರಿನಲ್ಲಿರುವ ೧೮೦ ಸ್ಲಮ್‌ಗಳನ್ನು ಎಲ್ಲರೂ ಹಂಚಿಕೊಂಡು ಬಿಟ್ಟರೆ ಅವುಗಳ ಅಭಿವೃದ್ಧಿ ಜಾಗತ್ರೆ ಆಗುತ್ತದೆ. ಇದನ್ನು ನೀವು ಮಾನವೀಯತೆಯ ದೃಷ್ಟಿಯಿಂದ ನೋಡಬೇಕೇ ಹೊರತು ರಾಜಕೀಯ ದೃಷ್ಟಿಯಿಂದ ನೋಡಬಾರದು. ಹಾಗೆ ನೋಡಿದರೆ ಎಲ್ಲವೂ ರಾಜಕೀಯ ದೃಷ್ಟಿಯಿಂದಲೇ ನಡೆಯುತ್ತಿರುವುದು. ಮುಖ್ಯಮಂತ್ರಿಗಳು ವಾಸ ಮಾಡುತ್ತಿರುವ ಮನೆ ಸರ್ಕಾರಕ್ಕೆ ಸೇರಿದ್ದಾದರೂ ಸಹ, ಎಲ್ಲ ರಾಜಕೀಯ ಚಟುವಟಿಕೆಗಳೂ ಅಲ್ಲಿಯೇ ನಡೆಯುತ್ತದೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ನೀವು ಮಂತ್ರಿಗಳಾಗಿದ್ದಾಗ ನಾವು ನಿಮ್ಮ ಮನೆಗೆ ಬರುತ್ತಿದ್ದೆವು.

ಶ್ರೀ ವೈ. ರಾಮಕೃಷ್ಣ.—ಈಗ ಕಾರ್ಪೊರೇಷನ್ ಚುನಾವಣೆ ಸಹ ಹತ್ತಿರ ಬಂದಿದೆ. ಆದಕಾರಣ ಇದನ್ನು ರಾಜಕೀಯ ದೃಷ್ಟಿಯಿಂದ ಮಾಡದೆ ಮಾನವೀಯತೆಯ ದೃಷ್ಟಿಯಿಂದ ಮಾಡಿ. ಒಬ್ಬೊಬ್ಬರು ಮಂತ್ರಿಗಳಿಗೆ ಇಷ್ಟಿಷ್ಟು ಸ್ಲಮ್‌ಗಳು ಎಂದು ಹಂಚಿ. ಮಾನ್ಯ ಗುಂಡೂರಾವ್ ಅವರಿಗೂ ಹಂಚಿ. ಮಾನ್ಯ ಪ್ರಭಾಕರ್ ಅವರಿಗೆ ಹೆಚ್ಚಿನ ಸಂಖ್ಯೆ ಕೊಡಿ, ಅವರು ತಗೆದುಕೊಳ್ಳುತ್ತಾರೆ. ಅವರ ಇಲಾಖೆಗೆ ಸಂಬಂಧಪಟ್ಟಂತೆ ಮಾನ್ಯ ಭಾಸ್ಕರನಾಯ್ಡು ಅವರು ಬಹಳ ಚೆನ್ನಾಗಿ ಹೇಳಿದರು. ಕುಡಿಯುವ ನೀರಿನ ಬಾವಿಗಳನ್ನು ಎಷ್ಟು ಚೆನ್ನಾಗಿ ಒದಗಿಸಿದ್ದಾರೆಂಬುದನ್ನು ಅವರು ಹೇಳಿದರು. ಒಟ್ಟಿನಲ್ಲಿ ಆಯಾ ಮಂತ್ರಿಗಳ ದಢೂತಿಯನ್ನು ಹಾಗೂ ಶಕ್ತಿಯನ್ನು ಅನುಸರಿಸಿ, ಇಷ್ಟು ಅವಧಿಯೊಳಗೆ ಇಷ್ಟು ಸ್ಲಂಗಳನ್ನು ಕ್ಲಿಯರ್ ಮಾಡಬೇಕೆಂದು ಹೇಳಿ ; ಅಲ್ಲಿ ಸ್ಲಮ್ ಕ್ಲಿಯರೆನ್ಸ್ ಅಂದರೆ, ಆ ಜನರಿಗೆ ಪುನರ್ ವಸತಿಗಳನ್ನು ಕಲ್ಪಿಸಿಕೊಡಬೇಕು, ಅವರಿಗಿರುವ ಸಮಸ್ಯೆಗಳನ್ನೆಲ್ಲಾ ಬಗೆಹರಿಸಬೇಕು, ಅಂದರೆ ನೀರಿನ ಸೌಕರ್ಯ, ವಸತಿ ಸೌಕರ್ಯ, ರಸ್ತೆಗಳ ಸೌಕರ್ಯ, ಲೈಟಿನ ಸೌಕರ್ಯ, ವಿದ್ಯಾಭ್ಯಾಸದ ಸೌಕರ್ಯ ಮೊದಲುಗೊಂಡು ಎಲ್ಲ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಸ್ಲಂಗಳಿವೆ ಎಂಬುದನ್ನು ಲೆಕ್ಕ ಹಾಕಿಸಿ, ಅವುಗಳನ್ನೆಲ್ಲಾ ಇನ್ನು ಒಂದು ವರ್ಷದಲ್ಲಿ ಕ್ಲಿಯರ್ ಮಾಡಿದ್ದೇ ಆದರೆ, ನಿಜವಾಗಿಯೂ ನೀವು ಬಡ ಜನರಿಗೆ ಸೇವೆ ಮಾಡುತ್ತಿದ್ದೀರಿ ಎಂಬುದು ಜನರಿಗೆ ಅರ್ಥವಾಗುತ್ತದೆ. ಇಲ್ಲದಿದ್ದರೆ ನಾನು ಮೊದಲೇ ಹೇಳಿದಂತೆ, ಈ ಸ್ಲಮ್‌ಗಳನ್ನು ಚುನಾವಣೆಯಲ್ಲಿ ಓಟುಗಳನ್ನು ಗಳಿಸಲು ಬೆಳೆಸಿಕೊಂಡು ಬಂದಿದ್ದೀರಿ ಎಂದು ಮತ್ತೊಂದು ಸಲ ಹೇಳಬೇಕಾಗುತ್ತದೆ. ಈ ಜನರಿಂದ ಓಟುಗಳನ್ನು ಪಡೆದ ಮೇಲೆ ಅವರ ಯೋಗಕ್ಷೇಮ ನೋಡಿಕೊಳ್ಳುವ ಕೆಲಸವನ್ನು ವಿರೋಧ ಪಕ್ಷದವರಿಗೆ ಬಿಡುತ್ತೀರಿ. ಇದು ನಿಮಗೆ ಶೋಭಾಯಮಾನವಾಗುವುದಿಲ್ಲವೆಂದು ಹೇಳುತ್ತೇನೆ. ಈ ಸ್ಲಮ್ ಕ್ಲಿಯರೆನ್ಸ್ ಕೇವಲ ಅವರಿಗೆ ಮನೆಗಳನ್ನು ಕಟ್ಟಿಸಿಕೊಡವುದರಿಂದ ಆಗುವುದಿಲ್ಲ ; ಅವರಿಗೆ ಪೂರ್ತ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರಿಂದ ಆಗುವುದಿಲ್ಲ, ಮಾನವೀಯತೆಯ ದೃಷ್ಟಿಯಿಂದ ಸ್ಲಮ್‌ಗಳನ್ನು ಕ್ಲಿಯರೆನ್ಸ್ ಮಾಡಬೇಕಾಗಿದೆ. ಈ ದೃಷ್ಟಿಯಿಂದಲೇ ಮಾನ್ಯ ರಾಮದೇವ್ ಅವರು ಈ ನಿರ್ಣಯ ತಂದಿದ್ದಾರೆ. ಸ್ಲಮ್ ಕ್ಲಿಯರೆನ್ಸ್ ಎಂದರೆ, ಮೊದಲು ಅಲ್ಲಿ ವಾಸ ಮಾಡುವ ಜನರ ಮನಸ್ಸಿನಲ್ಲಿರುವ

ಮನೋಭಾವವನ್ನು ಬದಲಾವಣೆ ಮಾಡಬೇಕು. ಅವರ ಹೃದಯ ಪರಿವರ್ತನೆಯಾಗಬೇಕು ; ಆದ ಕ್ಕಾಗಿ ಮೊದಲು ಅವರನ್ನು ವಿದ್ಯಾವಂತರನ್ನಾಗಿ ಮಾಡಿ. ಆ ಜನರ ಮಕ್ಕಳಿಗೆ ವಿದ್ಯೆ ಕಲಿಸಲು ಆಶ್ರಮ ಶಾಲೆಗಳನ್ನು ಪ್ರಾರಂಭ ಮಾಡಿ. ಆ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕೊಡಿ. ನಮ್ಮ ಅಪ್ಪ ಗುಡಿಸಿಲಿನಲ್ಲಿ ವಾಸ ಮಾಡಿದಂತೆ ತಾನೂ ಗುಡಿಸಿಲಿನಲ್ಲಿ ವಾಸ ಮಾಡಬಾರದೆಂಬ ಅಭಿಪ್ರಾಯ ಆ ಮಕ್ಕಳ ಮನಸ್ಸಿನಲ್ಲಿ ಬರಬೇಕು. ಆ ರೀತಿಯಲ್ಲಿ ಅವರನ್ನು ಬೆಳೆಸಬೇಕು.

೧.೦೦ ಪಿ. ಎಂ.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ರಾಮಕೃಷ್ಣ ಅವರು ಹೇಳುತ್ತಿರುವ ಸೌಲಭ್ಯಗಳೆಲ್ಲಾ ಬೆಂಗಳೂರು ನಗರದಲ್ಲಿ ಸಿಗುತ್ತದೆ. ಸರ್ಕಾರದವರು ಎಲ್ಲಿ ಸೌಲಭ್ಯಗಳನ್ನು ಕಲ್ಪಿಸಿ ಕೊಡುತ್ತಾರೆಂಬ ಕಾರಣದಿಂದಲೇ ಬೆಂಗಳೂರು ನಗರಕ್ಕೆ ಪ್ರತಿದಿನವೂ ಜನರು ವಲಸೆ ಬರುತ್ತಿದ್ದಾರೆ. ಆದಕ್ಕೋಸ್ಕರ ಅವರಲ್ಲಿರತಕ್ಕ ಮೆಂಟಲ್ ಸ್ಲಮ್ ಏನಿದೆ ಅದನ್ನು ಈ ದಿವಸ ಖಾಲಿ ಮಾಡಿಸಬೇಕು. ಆಗ ಬೆಂಗಳೂರಿನಲ್ಲಿರತಕ್ಕ ಸ್ಲಮ್ ಆಟೋಮಿಟಿಕ್ ಆಗಿ ಕಡಿಮೆಯಾಗುತ್ತದೆ. ಮಕ್ಕಳನ್ನು ಸ್ಲಮ್‌ಗಳಲ್ಲಿ ಇರುವುದಕ್ಕೆ ಬಿಡಬೇಡಿ. ಅವರ ತಂದೆತಾಯಿಗಳು ಸ್ಲಮ್‌ಗಳಲ್ಲಿ ಕಳೆದಿದ್ದು ಸಾಕು. ಸಂಪೂರ್ಣವಾಗಿ ಸ್ಲಮ್ ಹೋಗಲಾಡಿಸುವು ದಕ್ಕೆ ಬದಲಾಗಿ ಸುಮ್ಮನೆ ಶ್ಯಾಂಪಲಗೊಸ್ಕರ ಅಲ್ಲಿ ಇಲ್ಲಿ ಸ್ವಲ್ಪ ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಸ್ಲಮ್ ಹೋಗುವುದು ಕಷ್ಟವಾಗುತ್ತದೆ. ಈಗ ಸ್ಲಂ ನಿರ್ಮೂಲನ ಮಾಡುವುದಕ್ಕೆ ಬಜೆಟ್‌ನಲ್ಲಿ ಏನು ಹಣವನ್ನು ಒದಗಿಸಿದ್ದೀರಿ ಆ ಎಲ್ಲಾ ಹಣವನ್ನು ಕೂಡ ಸ್ಲಮ್ ವಿರಿಯಾದಲ್ಲಿರತಕ್ಕಂಥ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಖರ್ಚು ಮಾಡಿ. ಅವರೆಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಿದರೆ ಸ್ಲಮ್ ತನ್ನಷ್ಟಕ್ಕೆ ತಾನೇ ಸುಧಾರಣೆಯಾಗುತ್ತದೆ. ಇವರನ್ನು ವಿದ್ಯಾವಂತರನ್ನಾಗಿ ಮಾಡಿದರೆ ನಮ್ಮ ತಂದೆತಾಯಿಗಳು ಸ್ಲಮ್‌ಗಳಲ್ಲಿ ಇದ್ದುದೇ ಸಾಕು ನಾವಾದರೂ ಒಳ್ಳೆಯ ಕಡೆ ವಾಸ ಮಾಡೋಣ, ಒಳ್ಳೆ ಜೀವನ ನಡೆಸೋಣ ಎಂಬ ಭಾವನೆ ಬರುತ್ತದೆ. ನಾವು ಒಳ್ಳೆಯ ನಾಗರೀಕರಾಗಿ ಬಾಳೋಣ ಎಂಬ ಭಾವನೆ ಉಂಟಾಗುತ್ತದೆ. ಈ ರೀತಿ ಮಾಡಿದರೆ ಸ್ಲಮ್ ನಾಶವಾಗುತ್ತದೆ. ಆದ್ದುದರಿಂದ ನಾನು ನಮ್ಮ ಸ್ನೇಹಿತರಾದ ರಾಂದೇವ್ ಅವರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು ಪುಸ್ಕೀಕರಿ ಸುತ್ತಾ ಕೆಲವಾರು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಈ ನಿರ್ಣಯವನ್ನು ವಿರೋಧ ಪಕ್ಷದವರು ತಂದಿದ್ದಾರೆಂದು ಇದನ್ನು ಕೈಬಿಡಬೇಡಿ. ಈ ಒಂದು ಸಮಸ್ಯೆಯನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕೇ ಹೊರತು ರಾಜಕೀಯ ದೃಷ್ಟಿಯಿಂದ ನೋಡಬಾರದೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. CHAIRMAN.—The House stands adjourned to meet again at 1 P.M. on Monday the 9th April 1979

The house adjourned Two Minutes past One of the Clock to meet again at One of the Clock on Monday, the 9th April 1979.